# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026





ಹಂಪಿ ಟೈಮ್ಸ್ HAMPI TIMES Kannada Daily

BOOK SPACE
as your requirement
Special Offer Just For You!
Special Discount And Free Creative Support
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:02 Volume:02 • ಸಂಚಿಕೆ: 302 Issue: 302 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 11.06.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



DC & SSLC TOPER TALK
scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ
(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ



ಹಂಪಿ ಟೈಮ್ಸ್
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ:
ಕಚೇರಿ ವಿಳಾಸ:
ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201
ವಿಜಯನಗರ ಜಿಲ್ಲೆ
ಮೊ: 9448633038
hampitimes@gmail.com
visit for Daily updates
epaper.hampitimes.com


## ಆನಂದ ಬಾಣ





ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates


### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ವೈದ್ಯಾಧಿಕಾರಿಗಳಿಗೆ ಖಡಕ್ ಎಚ್ಚರಿಕೆ। ಅಂತರ ಇಲಾಖಾ ಸಮನ್ವಯ ಸಮಿತಿ ಸಭೆ

# ವೈದ್ಯರು ನಿರ್ಲಕ್ಷ್ಯತನ ತೋರಿದ್ರೆ ಎಫ್‌ಐಆರ್

### ಸರಿಯಾದ ಸಮಯಕ್ಕೆ ಗರ್ಭಿಣಿ ಮತ್ತು ಬಾಣಂತಿಯರ ತಪಾಸಣೆ। ಚಿಕಿತ್ಸೆಗೆ ಬಂದಾಗ ಕಡ್ಡಾಯವಾಗಿ ಇಸಿಜಿ ಪರೀಕ್ಷೆ

### ಆಯುಷ್ ಕೇಂದ್ರದಲ್ಲಿ ಗರ್ಭಿಣಿಯರು ತಪಾಸಣೆ, ಲಸಿಕೆ, ಕಾಲ್ಸಿಯಂ, ಕಬ್ಬಿಣ ಅಂಶಯುಕ್ತ ಮಾತ್ರೆಗಳನ್ನು ನೀಡಬೇಕು

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯ ಯಾವುದೇ ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ತಾಯಿ, ಶಿಶು ಮತ್ತು ಮಕ್ಕಳ ಮರಣದಲ್ಲಿ ವೈದ್ಯರ ನಿರ್ಲಕ್ಷ್ಯತನ ಬಗ್ಗೆ ವರದಿಯಾದರೇ ಅಂತಹ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ವೈದ್ಯಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಡಿಟಿಎಫ್‌ಐ, ದಡಾರ ಮತ್ತು ರುಬೇಲ್ಲಾ ನಿರ್ಮೂಲನ ಕಾರ್ಯಕ್ರಮದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಸೋಮವಾರ ಮಾತನಾಡಿದರು. ವೈದ್ಯರು ಶಸ್ತ್ರಚಿಕಿತ್ಸೆ ಮಾಡುವ ವೇಳೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಯಾವುದೇ ರೀತಿಯಿಂದ ನಿರ್ಲಕ್ಷತನ ತೋರದೆ ಶಸ್ತ್ರಚಿಕಿತ್ಸೆಯನ್ನು ನಡೆಸಬೇಕು. ಒಂದೊಂದು ಜೀವವು ಅಮೂಲ್ಯವಾಗಿದೆ ಆದ್ದರಿಂದ ರೋಗಿಗಳ ಬಗ್ಗೆ ವೈದ್ಯರು ವಿಶೇಷ ಕಾಳಜಿ ವಹಿಸಬೇಕಿದೆ. ಗರ್ಭಿಣಿ ಮತ್ತು ಬಾಣಂತಿಯರ ಸರಿಯಾದ ಸಮಯಕ್ಕೆ ತಪಾಸಣೆ ಮಾಡಿಸಬೇಕು ಹಾಗೂ ಪೌಷ್ಠಿಕಾಂಶಯುಕ್ತ ಆಹಾರವನ್ನು ಸೇವನೆ ಶಿಫಾರಸು ಮಾಡಬೇಕು. ಆಯುಷ್ ಕೇಂದ್ರದಲ್ಲಿ ನಿಯಮಿತವಾಗಿ ಗರ್ಭಿಣಿಯರು ತಪಾಸಣೆ ಮತ್ತು ಲಸಿಕೆ, ಕಾಲ್ಸಿಯಂ





ಮತ್ತು ಕಬ್ಬಿಣ ಅಂಶಯುಕ್ತ ಮಾತ್ರೆಗಳನ್ನು ನೀಡಬೇಕು. ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿಯರು ಚಿಕಿತ್ಸೆಗೆ ಬಂದಾಗ ಕಡ್ಡಾಯವಾಗಿ ಇಸಿಜಿ ಪರೀಕ್ಷೆಯನ್ನು ಮಾಡಬೇಕು. ರುಬೆಲ್ಲಾ ರೋಗವು ಗರ್ಭಿಣಿಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಗ್ಲೂಕೋಮ, ಕಣ್ಣಿನ ಪೊರೆ, ಕಿವುಡುತನ, ಮೆದಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿ ಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ವಿಶೇಷ ಗಮನ ಹರಿಸಿ ವೈದ್ಯರು ಕಾಳಜಿಯಿಂದ ಕರ್ತವ್ಯ ನಿರ್ವಹಿಸಬೇಕು. ರಕ್ತದಾನ ಶಿಬಿರಗಳನ್ನು ಕಾಲೇಜುನಲ್ಲಿ ಮತ್ತು ದಿನಾಚರಣೆಗಳ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯ ಆಯೋಜನೆ ಮಾಡಬೇಕು. ರಕ್ತದಾನ ಮಾಡುವುದರಿಂದ ಹೃದಯ ಸಂಬಂಧಿ ರೋಗಗಳನ್ನು ತಡೆಯಲು ಸಾಧ್ಯವಾಗಿದೆ. ಆರೋಗ್ಯವಂತ ವ್ಯಕ್ತಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬೇಕು. ಅಪಘಾತ ಮತ್ತು ಗರ್ಭಿಣಿಯರಿಗೆ ಸರಿಯಾದ ಸಮಯಕ್ಕೆ ರಕ್ತದೊರೆಯದೆ ಚಿಕಿತ್ಸೆ ವಿಫಲವಾಗಿ ಮೃತಪಡುತ್ತಿದ್ದಾರೆ. ಇದನ್ನು ಮನಗಂಡು ಅಮೂಲ್ಯವಾದ ಜೀವ ಉಳಿಸಲು ಆರೋಗ್ಯವಂತರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡುವಂತೆ ಸಲಹೆ ನೀಡಿದರು. ಜಿಲ್ಲೆಯಲ್ಲಿ ತಾಯಿ, ಶಿಶು ಮತ್ತು ಮಕ್ಕಳ ಮರಣದ ವರದಿಯ ಬಗ್ಗೆ ಪರಿಶೀಲನೆ ಮಾಡಿದರು. ದಡಾರ ಮತ್ತು ರುಬೇಲ್ಲಾ ಮುಕ್ತ ಜಿಲ್ಲೆಯನ್ನಾಗಿಸಲು ಜವಾಬ್ದಾರಿಯುತವಾಗಿ ವೈದ್ಯರು ಕಾರ್ಯನಿರ್ವಹಿಸಬೇಕಿದೆ ಎಂದರು.

ಈ ವೇಳೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯ್ಕ್.ಎಲ್.ಆರ್, ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ವೈದ್ಯಾಧಿಕಾರಿಗಳಾದ ಡಾ.ಹರಿಪ್ರಸಾದ್, ಡಾ.ಭಾಸ್ಕರ್, ಡಾ.ಷಣ್ಮುಖ ನಾಯ್ಕ, ಡಾ.ಸೋಮಶೇಖರ, ಎಂ.ಧರ್ಮನಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಸುಭದ್ರ, ಸೇರಿದಂತೆ ವಿವಿದ ತಾಲೂಕು ಆರೋಗ್ಯ ಅಧಿಕಾರಿಗಳು, ವೈದ್ಯರು ಭಾಗವಹಿಸಿದ್ದರು.

# ಅರ್ಚಕರಿಗೆ ಮಾಸಿಕ ಗೌರವಧನಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ದಾವಣಗೆರೆ

ಜೈನ್ ಸಮುದಾಯ ಬಸದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಧಾನ ಮತ್ತು ಸಹಾ ಯಕ ಅರ್ಚಕರುಗಳಿಗೆ ಹಾಗೂ ಸಿಖ್ ಗುರುದ್ವಾರಗಳ ಲ್ಲಿರುವ ಮುಖ್ಯ ಮತ್ತು ಸಹಾಯಕ ಗ್ರಂಥಿಗಳಿಗೆ ಮಾಸಿಕ ಗೌರವಧನ ಪಡೆಯಲಿಚ್ಛಿಸುವ ಅರ್ಹ ಫಲಾನುಭವಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 26 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಫಲಾನುಭವಿಗಳು ಜಿಲ್ಲೆಯ ಜೈನ್ ಬಸದಿಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಸಂಘಗಳ ನೊಂದಣಿ ಕಾಯ್ದೆ ಅಥವಾ ಇತರೆ ಸಂಬಂಧಪಟ್ಟ ಕಾಯ್ದೆ ಅನ್ವಯ ನೋಂದಣಿಯಾದ ಪ್ರಧಾನ ಅರ್ಚಕ, ಗ್ರಂಥಿಗೆ ಮಾಸಿಕ ರೂ.6000/, ಸಹಾಯಕ ಗ್ರಂಥಿ, ಅರ್ಚಕರಿಗೆ ಮಾಸಿಕ ರೂ.5000/ ಗೌರವಧನ ನೀಡಲಾಗುವುದು. ಅರ್ಹ ಫಲಾನುಭವಿಗಳು ನಿಗದಿತ ಅರ್ಜಿಯೊಂದಿಗೆ ಅರ್ಚಕ, ಗ್ರಂಥಿಗಳ ಭಾವಚಿತ್ರ, ಬ್ಯಾಂಕ್ ಖಾತೆ ಮತ್ತು ಆಧಾರ್ ಪ್ರತಿ, ಹುದ್ದೆಗೆ ಸಂಬಂಧಪಟ್ಟ ಧಾರ್ಮಿಕ ವಿದ್ಯಾರ್ಹತೆ ಕುರಿತು ದಾಖಲೆ, ಕಳೆದ ಮೂರು ವರ್ಷಗಳಲ್ಲಿ ವಾಸವಿರುವ ಬಗ್ಗೆ ಸ್ಥಳೀಯ ತಹಶೀಲ್ದಾರ್ ಅವರಿಂದ ವಾಸಸ್ಥಳ ದೃಢೀಕರಣ ಹಾಗೂ ಸಂಸ್ಥೆಯವರು ಅರ್ಚಕರ ಮಾಹೆವಾರು ಕರ್ತವ್ಯದ ಹಾಜರಾತಿ, ಸೇವಾ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ ಜಿಲ್ಲಾಡಳಿತ ಭವನದಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಇನ್‌ಸೆಕ್ಟ್ ಕಲೆಕ್ಟರ್ ಹುದ್ದೆಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಪ್ರಸ್ತುತ ಖಾಲಿಯಿರುವ ಒಂದು ಇನ್‌ಸೆಕ್ಟ್ ಕಲೆಕ್ಟರ್ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವಿಜ್ಞಾನ ವಿಭಾಗದಲ್ಲಿ ಪಿಯುಸಿ, 12ನೇ ತರಗತಿ ವಿದ್ಯಾರ್ಹತೆ ಹೊಂದಿರಬೇಕು. 40 ವರ್ಷ ಮೀರಿರಬಾರದು. ಕಲ್ಯಾಣ ಕರ್ನಾಟಕದ ನಿವಾಸಿಯಾಗಿದ್ದು, ಸಾಮಾನ್ಯ ಅಭ್ಯರ್ಥಿ ಮೀಸಲಾತಿ ನೀಡಲಾಗಿದೆ. ಮಾಸಿಕ ವೇತನ ರೂ.15,114 ಹಾಗೂ ಎನ್‌ಹೆಚ್‌ಎಂ ನಿಯಮಾವಳಿ ಪ್ರಕಾರ ಕ್ಷೇತ್ರ ಭೇಟಿಗಾಗಿ ದಿನಭತ್ಯೆ, ಪ್ರಯಾಣ ಭತ್ಯೆ ಪಾವತಿಸಲಾಗುವುದು.

ಅರ್ಜಿಯನ್ನು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಚೇರಿ, 60 ಹಾಸಿಗೆ ಆಸ್ಪತ್ರೆ ಹಿಂಭಾಗ, ಮಸೀದಿ ಹತ್ತಿರ, ಹೊಸಪೇಟೆಯಲ್ಲಿ ಜೂ.9 ರಿಂದ ಜೂ.20 ರವರೆಗೆ ಕಚೇರಿ ಸಮಯದಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ. ಹುದ್ದೆಯ ನೇಮಕಾತಿಗೆ ಸಂಬಂಧಿಸಿದ ಪೂರ್ಣ ಪ್ರಮಾಣದ ಹಕ್ಕನ್ನು ಜಿಲ್ಲಾ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಕಾಯ್ದಿರಿಸಿಕೊಂಡಿದೆ. ಆಯ್ಕೆಯನ್ನು ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು ಎಂದು ಜಿಲ್ಲಾ ವಿಬಿಡಿಸಿ ಅಧಿಕಾರಿಗಳು ತಿಳಿಸಿದ್ದಾರೆ.

# ನವೋದಯ ವಿದ್ಯಾರ್ಥಿಗಳಿಗೆ ಸತ್ವರಹಿತ ಆಹಾರ

### ಪ್ರಾಚಾರ್ಯ ಹಾಗೂ ಅಡುಗೆ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡ ಶಾಸಕ ಡಾ.ಎನ್.ಟಿ.ಶ್ರೀನಿವಾಸ್

■ ಹಂಪಿ ಟೈಮ್ಸ್ ಕೂಡ್ಲಿಗಿ

ತಾಲೂಕಿನ ಪಿಎಂ ಶ್ರೀ ಜವಾಹಾರ್ ನವೋದಯ ವಿದ್ಯಾಲಯದಲ್ಲಿ ವಿಧ್ಯಾರ್ಥಿಗಳಿಗೆ ಸತ್ವರಹಿತ ಆಹಾರ ಪೂರೈಕೆ ನೋಡಿದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಪ್ರಾಚಾರ್ಯ ಹಾಗೂ ಮುಖ್ಯ ಅಡುಗೆ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡ ಘಟನೆ ಮಂಗಳವಾರ ಜರುಗಿತು. ತಾಲೂಕಿನ ಚಿಕ್ಕ ಜೋಗಿಹಳ್ಳಿ ಕೇಂದ್ರೀಯ ಜವಾಹರ್ ನವೋದಯ ವಿದ್ಯಾಲಯದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಶಾಸಕರು ವೇದಿಕೆ ಕಾರ್ಯಕ್ರಮದ ನಂತರ ಉಪಹಾರ ಸೇವಿಸಲು ವಿಧ್ಯಾರ್ಥಿನಿಯರ ಉಪಹಾರ ಕೊಠಡಿಯಲ್ಲಿ ಹೋದಾಗ ಪತ್ರಕರ್ತರು ವಿದ್ಯಾಲಯದ ಅವ್ಯವಸ್ಥೆಯನ್ನು ಗಮನಿಸಿ ಪರಿಸ್ಥಿತಿಯನ್ನು ಬಯಲಿಗೆಳೆದರು. ಅಡುಗೆ ಕೋಣೆ ಸ್ವಚ್ಛತೆ ಇಲ್ಲದೆ ನೊಣಗಳು ಆಹಾರ ಸಾಮಾಗ್ರಿಗಳಿಗೆ ಮುತ್ತಿದ್ದವು, ವಿಧ್ಯಾರ್ಥಿಗಳಿಗೆ ತಯಾರಿಸಿದ್ದ ಫಲಾವ್ ನಲ್ಲಿ ತರಕಾರಿ ಮಾಯಾವಾಗಿತ್ತು, ಅಕ್ಕಿಯಂತು ಮುಗ್ಗು ವಾಸನೆ ಬರುತ್ತಿತ್ತು. ಇನ್ನೂ ಚಪಾತಿ ಹಿಟ್ಟು ಕಲೆಸುವ ಯಂತ್ರ ಸ್ವಚ್ಛ ಮಾಡದೇ ಇರುವ ಕಾರಣ ಯಂತ್ರ ಕಲೆಗಳಿಂದ ತುಕ್ಕು ಹಿಡಿದಿರುವುದು ಸಹ ಶಾಸಕರ ಗಮನಕ್ಕೆ ಬಂತು. ಉಪಹಾರದ ಗುತ್ತಿಗೆದಾರರನ್ನು ಗದರಿದ ಶಾಸಕರು, ಇದರ ಜವಾಬ್ದಾರಿ



ಹೊತ್ತ ಹೊಸಪೇಟೆ ಎಸಿ ವಿವೇಕಾನಂದ ಅವರಿಗೆ ಸ್ಥಳದಲ್ಲಿಯೇ ಫೋನ್ ಮಾಡಿ ವಿದ್ಯಾಲಯದಲ್ಲಿ ಅಡುಗೆ ಕಳಪೆ ಆಹಾರದ ಬಗ್ಗೆ ತಿಳಿಸಿ, ಪರಿಶೀಲನೆ ಮಾಡುವಂತೆ ಸೂಚಿಸಿದರು. ಸ್ಥಳದಲ್ಲಿ ಇದ್ದ ಕೆಲ ಪೋಷಕರು ಹಾಗೂ ಸಾರ್ವಜನಿಕರು ಈ ಬಗ್ಗೆ ದೂರುಗಳು ಹೇಳಿದರೆ ಉಪ ಪ್ರಾಚಾರ್ಯೆ ದೂರು ನೀಡುವ ಪೋಷಕರ ವಿಧ್ಯಾರ್ಥಿಗಳನ್ನು ಅನಗತ್ಯ ಕಾರಣ ಹೇಳಿ ಬೈಯ್ಯುವುದು ಮಾಡು ತ್ತಾರೆ ಎಂದು ಶಾಸಕರ ಎದುರು ಅಲವತ್ತು ಕೊಂಡರು.

ಇದಕ್ಕೂ ಮುಂಚೆ ಶಾಸಕರು ಉಪಹಾರ ಸೇವಿಸಲು ಬರುವೆ ವೇಳೆ ಬಾಲಕರ ಉಪಹಾರ ಕೊಠಡಿಯ ಹಿಂಬಾಗ ಆಹಾರ ಸರಿಯಾಗಿ ಬೇಯಿಸದ ಕಾರಣ ವಿಧ್ಯಾರ್ಥಿಗಳು ತಿನ್ನದೆ ಹಾಗೆ ಚೆಲ್ಲಿರುವುದನ್ನು ಪತ್ರಕರ್ತರು ಹಾಗೂ ಶಾಸಕರು ಗಮನಿಸಿ ಪ್ರಾಚಾರ್ಯ ಸುದೇಶ್ ಗೋಪಾಲ ಮಂಜುರೇ ಅವರಿಗೆ ಅವ್ಯವಸ್ಥೆ ತೋರಿಸಿ ಅಸಮಾಧಾನ ವ್ಯಕ್ತಪಡಿಸಿದರು. ಬಾಲಕರ ಉಪಹಾರ ಕೊಠಡಿ ಪಕ್ಕದಲ್ಲಿ ಗಿಡಗಂಟಿಗಳು ಅವೃತ್ತವಾಗಿ ನಾಗರಹಾವು ಇದ್ದದ್ದು ಎಲ್ಲರೂ ಗಮನಿಸಿದರು. ಇನ್ನೂ ವಿದ್ಯಾಲಯದ ಕಾಲುವೆಗಳು ಸ್ವಚ್ಚತೆ ಇಲ್ಲದೆ ಕಸಕಡ್ಡಿಗಳು ತುಂಬಿದ್ದವು. ಇಷ್ಟೆಲ್ಲ ಅವ್ಯವಸ್ಥೆ ಗಮನಿಸಿದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಪ್ರಾಚಾರ್ಯ ಸುದೇಶ್ ಗೋಪಾಲ ಮಂಜರೆ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ನವೋದಯ ವಿದ್ಯಾಲಯಕ್ಕೆ ಅದರದೇ ಆದ ಘನತೆ ಇದ್ದು, ಸಾವಿರಾರು ವಿಧ್ಯಾರ್ಥಿಗಳು ಇಲ್ಲಿ ಅಭ್ಯಾಸ ಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹೆಸರಾಂತ ನವೋದಯ ವಿದ್ಯಾಲಯದ ಬಗ್ಗೆ ಜನರಲ್ಲಿನ ಅಪನಂಬಿಕೆ ಬರದಂತೆ ಕರ್ತವ್ಯ ಪಾಲನೆ ಮಾಡಿ ಎಂದು ಖಡಕ್ ಸೂಚನೆ ನೀಡಿದರು.

ಗ್ರಾಪಂ ಅಧ್ಯಕ್ಷ ಎಂ.ಸಿ. ಅಶೋಕ ನಾಯ್ಕ್, ಎಪಿಎಂಸಿ ಅಧ್ಯಕ್ಷ ಎಂ.ಮುತ್ತೆಪಾಲಯ್ಯ, ಪಿಡಿಒ ಭರತ್ ಕುಮಾರ್, ಗ್ರಾಪಂ ಸದಸ್ಯರಾದ ರಾಜೇಶ್ ನಾಯ್ಕ್, ಓಬಣ್ಣ ಸೇರಿದಂತೆ ಅನೇಕರು ಇದ್ದರು.

# ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರ ಆಯ್ಕೆ ಪಟ್ಟಿ ಪ್ರಕಟ

■ ಹಂಪಿ ಟೈಮ್ಸ್ ದಾವಣಗೆರೆ

ಪ್ರಸಕ್ತ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿಶಾಲೆ, ಕಾಲೇಜು ಮತ್ತು ಮಾದರಿಶಾಲೆ, ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರು, ಅತಿಥಿ ಉಪನ್ಯಾಸಕ ಹುದ್ದೆಯ 1:2 ಆಯ್ಕೆ ಪಟ್ಟಿಯನ್ನು ಜಿಲ್ಲಾ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜೂನ್ 12 ರಂದು ಅತಿಥಿ ಶಿಕ್ಷಕರು ಮತ್ತು ಜೂನ್ 13 ಬೆಳಿಗ್ಗೆ 10 ಗಂಟೆಗೆ ಅತಿಥಿ ಉಪನ್ಯಾಸಕರ (1:2 ಆಯ್ಕೆಯಾದ) ಆಯ್ಕೆ ಅಭ್ಯರ್ಥಿಗಳು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆ, ಹೊಸಕುಂದುವಾಡ, ದಾವಣಗೆರೆ ಟೌನ್ ಇಲ್ಲಿ ನಡೆಯುವ ಪ್ರತ್ಯಾಕ್ಷಿಕೆ ತರಗತಿ (Demo Class) ಗಳಿಗೆ ಮೂಲ ಅಂಕಪಟ್ಟಿ ಹಾಗೂ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192–250022 ಸಂಪರ್ಕಿಸಬೇಕು.

ಹಂಪಿ ಟೈಮ್ಸ್
ಸಂ | ಪಾ | ದ | ಕೀ | ಯ

# ಮಳೆಗಾಲದ ಸವಾಲುಗಳು: ಸುರಕ್ಷತೆ, ಸಿದ್ಧತೆ ನಮ್ಮ ಆದ್ಯತೆಯಾಗಲಿ

ಮಳೆಗಾಲ ಆರಂಭವಾಗಿದೆ. ಭಾರಿ ಮಳೆಯಿಂದಾಗಿ ಹಲವು ಪ್ರದೇಶಗಳಲ್ಲಿ ಈಗಾಗಲೇ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಸಂದರ್ಭದಲ್ಲಿ, ಮಕ್ಕಳ ಸುರಕ್ಷತೆಯಿಂದ ಹಿಡಿದು ಹಳೆಯ ಮನೆಗಳ ಕುಸಿತದವರೆಗೆ, ನದೀ ತೀರದಲ್ಲಿ ವಾಸಿಸುವವರ ಭದ್ರತೆಯವರೆಗೆ ಅನೇಕ ಸವಾಲುಗಳು ನಮ್ಮ ಕಣ್ಣಮುಂದಿವೆ. ಇವುಗಳಿಗೆ ಜನರ ಜಾಗೃತಿ ಮತ್ತು ಸರ್ಕಾರದ ಸಕಾಲಿಕ ಕ್ರಮಗಳು ಅತ್ಯಗತ್ಯ.



**ಶಿಥಿಲಗೊಂಡ ಶಾಲೆಗಳಲ್ಲಿ ಮಕ್ಕಳ ಭವಿಷ್ಯ :** ಮಳೆಗಾಲ ಆರಂಭವಾಗುತ್ತಿದ್ದಂತೆ, ಶಿಥಿಲಗೊಂಡಿರುವ ಸರ್ಕಾರಿ ಶಾಲೆಗಳ ದುಸ್ಥಿತಿ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಸೋರುತ್ತಿರುವ ಛಾವಣಿಗಳು, ಶಿಥಿಲಗೊಂಡ ಗೋಡೆಗಳು, ಬಿದ್ದ ಪ್ಲಾಸ್ಟರ್‌ಗಳು – ಇಂತಹ ಅಪಾಯಕಾರಿ ವಾತಾವರಣದಲ್ಲಿ ಮಕ್ಕಳು ಪಾಠ ಕಲಿಯುವುದು ಎಷ್ಟು ಸುರಕ್ಷಿತ? ಮಳೆಯ ಭಯದಲ್ಲಿ ಜೀವ ಕೈಯಲ್ಲಿ ಹಿಡಿದು ಕುಳಿತುಕೊಳ್ಳುವ ಮಕ್ಕಳು ಹೇಗೆ ತಾನೇ ಪರಿಣಾಮಕಾರಿಯಾಗಿ ಪಾಠ ಕಲಿಯಬಲ್ಲರು? ಇದು ಮಕ್ಕಳ ಶಿಕ್ಷಣದ ಹಕ್ಕಿಗೆ ಮಾತ್ರವಲ್ಲ, ಅವರ ಜೀವಕ್ಕೂ ಅಪಾಯ ತರುತ್ತಿದೆ. ಸರ್ಕಾರವು ಕೂಡಲೇ ಇಂತಹ ಶಾಲೆಗಳನ್ನು ಗುರುತಿಸಿ, ತುರ್ತು ದುರಸ್ತಿ ಕಾರ್ಯ ಕೈಗೊಳ್ಳಬೇಕು ಅಥವಾ ಮಕ್ಕಳಿಗೆ ಸುರಕ್ಷಿತ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಸ್ಥಳೀಯ ಸಮುದಾಯಗಳು ಮತ್ತು ಶಾಲಾ ಆಡಳಿತ ಮಂಡಳಿಗಳು ಸಹ ಈ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಕೈಜೋಡಿಸಬೇಕು.

**ಹಳೆಯ ಮನೆಗಳ ಕುಸಿತದ ಅಪಾಯ :** ಪ್ರತಿ ವರ್ಷ ಮಳೆಗಾಲದಲ್ಲಿ ಹಳೆಯ ಮತ್ತು ಶಿಥಿಲಗೊಂಡ ಮನೆಗಳು ಕುಸಿದು ಬೀಳುವ ಘಟನೆಗಳು ವರದಿಯಾಗುತ್ತವೆ. ಇದು ಜೀವಹಾನಿ ಮತ್ತು ಆಸ್ತಿಪಾಸ್ತಿಗೆ ದೊಡ್ಡ ನಷ್ಟವನ್ನುಂಟುಮಾಡುತ್ತದೆ. ವಿಶೇಷವಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಹಳೆಯ ಮನೆಗಳ ಮಾಲೀಕರು ತಮ್ಮ ಮನೆಗಳ ಸ್ಥಿತಿಗತಿಯ ಬಗ್ಗೆ ಜಾಗೃತರಾಗಿರಬೇಕು. ಯಾವುದೇ ಅಪಾಯದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ಮನೆ ಖಾಲಿ ಮಾಡಿ ಸುರಕ್ಷಿತ ಸ್ಥಳಕ್ಕೆ ತೆರಳಬೇಕು. ಸ್ಥಳೀಯ ಆಡಳಿತಗಳು ಇಂತಹ ಅಪಾಯಕಾರಿ ಕಟ್ಟಡಗಳನ್ನು ಗುರುತಿಸಿ, ನೋಟಿಸ್ ನೀಡಿ, ಅಗತ್ಯವಿದ್ದರೆ ತೆರವುಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

**ತ್ಯಾಜ್ಯ ತುಂಬಿದ ಚರಂಡಿಗಳು ಮತ್ತು ನದಿ ತೀರದ ಸುರಕ್ಷತೆ :** ಮಳೆಗಾಲದಲ್ಲಿ ಎದುರಾಗುವ ಮತ್ತೊಂದು ದೊಡ್ಡ ಸಮಸ್ಯೆ ಎಂದರೆ ತ್ಯಾಜ್ಯ ತುಂಬಿದ ಚರಂಡಿಗಳು. ಇವು ಮಳೆ ನೀರು ಸರಾಗವಾಗಿ ಹರಿಯುವುದಕ್ಕೆ ಅಡ್ಡಿಯಾಗಿ, ರಸ್ತೆಗಳಲ್ಲಿ ಮತ್ತು ವಸತಿ ಪ್ರದೇಶಗಳಲ್ಲಿ ನೀರು ನಿಲ್ಲಲು ಕಾರಣವಾಗುತ್ತವೆ. ಇದು ಸೊಳ್ಳೆಗಳ ಉತ್ಪತ್ತಿಗೆ ಮತ್ತು ರೋಗಗಳ ಹರಡುವಿಕೆಗೆ ಆಹ್ವಾನ ನೀಡುತ್ತದೆ. ಸ್ಥಳೀಯ ಪೌರ ಸಂಸ್ಥೆಗಳು ಮಳೆಗಾಲಕ್ಕೂ ಮುನ್ನವೇ ಚರಂಡಿಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಜನರು ಕೂಡ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ಕಸ ವಿಲೇವಾರಿಗೆ ಸಹಕರಿಸಬೇಕು.

ನದೀ ತೀರದಲ್ಲಿ ವಾಸಿಸುವ ಜನರಿಗೆ ಮಳೆಗಾಲವು ಅಕ್ಷರಶಃ ನರಕ ದರ್ಶನ ಮಾಡಿಸುತ್ತದೆ. ನದಿಗಳಲ್ಲಿ ನೀರಿನ ಮಟ್ಟ ಹೆಚ್ಚಿದಂತೆ ಪ್ರವಾಹದ ಭೀತಿ ಎದುರಾಗುತ್ತದೆ. ಸರ್ಕಾರವು ಇಂತಹ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಪ್ರವಾಹ ನಿರ್ವಹಣಾ ಯೋಜನೆಗಳನ್ನು ಸಿದ್ಧಪಡಿಸಬೇಕು, ಅಗತ್ಯವಿದ್ದರೆ ಸ್ಥಳಾಂತರ ಕೇಂದ್ರಗಳನ್ನು ತೆರೆಯಬೇಕು ಮತ್ತು ಜನರಿಗೆ ಮಾಹಿತಿ ಒದಗಿಸಬೇಕು. ನದಿ ತೀರದಲ್ಲಿ ವಾಸಿಸುವವರು ಕೂಡ ಪ್ರವಾಹದ ಸಂದರ್ಭದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಅರಿವು ಹೊಂದಿರಬೇಕು.

ಮಳೆಗಾಲ ಆಹ್ಲಾದಕರ ಅನುಭವ ನೀಡಿದರೂ, ಅದರೊಂದಿಗೆ ಹಲವು ಸವಾಲುಗಳನ್ನೂ ತರುತ್ತದೆ. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸರ್ಕಾರ, ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡುವುದು ಅನಿವಾರ್ಯ. ಸುರಕ್ಷಿತ ಮತ್ತು ಸುಸ್ಥಿರ ಮಳೆಗಾಲವನ್ನು ನಾವು ಖಚಿತಪಡಿಸಿಕೊಳ್ಳೋಣ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕಾರಹುಣ್ಣಿಮೆ... ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವ ಹಬ್ಬ

ಮನುಷ್ಯ ಸಮಾಜಜೀವಿ, ಸಂಘಜೀವಿ ಮತ್ತು ಸಹಜೀವಿ. ಅಲೆಮಾರಿಯಾಗಿದ್ದ ಮಾನವ ಕಾಲಕ್ರಮೇಣ ಬುದ್ಧಿ ಬೆಳದಂತೆಲ್ಲ ಹಲವರ ಜೊತೆಗೂಡಿ ಒಂದೆಡೆ ನೆಲೆಯೂರಲು ಆರಂಭಿಸಿದ. ಇದೇ ಕಾರಣದಿಂದಲೇ ಹಟ್ಟಿಗಳು, ಕೇರಿಗಳು, ಊರುಗಳು ನಗರಗಳು ಉದಯವಾದವು. ಆರಂಭಿಕ ಹಂತದಲ್ಲಿ ತಾನೊಬ್ಬನೇ ನೆಲವನ್ನು ಅಗೆದು-ಉಗಿದು ಬೆಳೆಗಳನ್ನು ಬೆಳೆಯುತ್ತಿದ್ದ. ಕಾಲಕ್ರಮೇಣ ತನ್ನ ಕೆಲಸ ಕಾರ್ಯಗಳ ಸುಗಮಿಕಿಗೆ ಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ಉಳುಮೆ ಮಾಡುವ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಲು ಸವಾರಿಗೆ ಬಳಸುವ, ಆಹಾರಕ್ಕಾಗಿ ಸಾಕುವ ಪರಿಪಾಠ ಬೆಳೆಸಿಕೊಂಡ. ಹೀಗೆ ತನ್ನ ಜೀವನದ ಎಲ್ಲಾ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುವ ಪ್ರಾಣಿಗಳಿಗೆ ಪೂಜ್ಯನೀಯ ಸ್ಥಾನವನ್ನು ನೀಡಿದ. ಹಾಲು ಕೊಡುವ ಹಸುಗಳನ್ನು ಗೋಮಾತೆ ಎಂದು, ಉಳುಮೆಗೆ ಸಹಕರಿಸುವ ಎತ್ತುಗಳನ್ನು ಸಾಕ್ಷಾತ್ ನಂದಿಯ ಸ್ವರೂಪವೆಂದು ಪೂಜಿಸಿದ. ವರ್ಷಪೂರ್ತಿ ಹೊಲಗದ್ದೆಗಳ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡ ಮನುಷ್ಯ ತನ್ನ ಆಸರಿಕೆ -ಬ್ಯಾಸರಿಕೆ ಕಳೆಯಲು ಜಾತ್ರೆ, ಹಬ್ಬ-ಹರಿದಿನ,ಪರಿಷೆಗಳನ್ನು ಆಚರಿಸುವ ಹವ್ಯಾಸ ಬೆಳೆಸಿಕೊಂಡ. ಇಂತಹ ಹಬ್ಬ ಹರಿದಿನಗಳ ಸಂಭ್ರಮದಲ್ಲಿ ತಾನೊಬ್ಬನೇ ಸಂಭ್ರಮಿಸಿದೆ,ತನ್ನ ಸುತ್ತಮುತ್ತಲ ಪ್ರಕೃತಿಯನ್ನು, ಸಾಕಿ ಸಲುಹಿದ ಪ್ರಾಣಿಗಳನ್ನು,ತನ್ನ ಚಟುವಟಿಕೆಗಳಿಗೆ ಅನುವಾಗುವ ಆಯುಧಗಳನ್ನು ಪೂಜಿಸುವ ರೂಢಿ ಬೆಳೆಸಿಕೊಂಡ. ಹಾಗೆಯೇ ಆಯಾ ಕಾಲಮಾನಕ್ಕೆ ದೊರಕುವ ಪದಾರ್ಥಗಳನ್ನು ಬಳಸಿಕೊಂಡು ಆರೋಗ್ಯವರ್ಧಕ ಅಡುಗೆಗಳನ್ನು ತಯಾರಿಸಿ ಸವಿಯುವ ಜಾಣ್ಮೆ ಬೆಳೆಸಿಕೊಂಡ. ಈ ಹಿನ್ನೆಲೆಯಲ್ಲಿ ಪ್ರಕೃತಿ ಆರಾಧನೆಯ ಮತ್ತು ಆಯುಧಗಳ ಆರಾಧನೆಯ ಕುರುಹಾಗಿ ಯುಗಾದಿಯನ್ನು, ಪ್ರಾಣಿಗಳ ಆರಾಧನೆಯ ಕುರುಹಾಗಿ ಕಾರಹುಣ್ಣಿಮೆಯನ್ನು ಉದಾಹರಿಸಬಹುದು.

ಬೇಸಿಗೆ ಸಮಯ ಮುಗಿದು ಮಳೆಗಾಲದ ಮುಂಗಾರು ಆರಂಭವಾಗುವ ಸಮಯಕ್ಕೆ ಬರುವ ಕಾರಹುಣ್ಣಿಮೆ ರೈತ ಸಮುದಾಯದ ಪ್ರಥಮ ಹಬ್ಬವೆಂದು ಕರೆಯಲ್ಪಟ್ಟಿದೆ. ಬೇಸಿಗೆಯಲ್ಲಿ ಎತ್ತುಗಳಿಂದ ಉಳುಮೆ ಮಾಡುವ ಅನ್ನದಾತರು ಬೆಳೆಯನ್ನು ಕಟಾವು ಮಾಡಿ, ಕಾರ ಹುಣ್ಣಿಮೆಯ ಸಮಯಕ್ಕೆ ಕೆಲಕಾಲ ಅವುಗಳಿಗೆ ವಿಶ್ರಾಂತಿ ನೀಡುತ್ತಾರೆ. ಇದೇ ಸಮಯಕ್ಕೆ ಆರಂಭವಾಗುವ ಮುಂಗಾರಿಗೆ ಹೊಲಗದ್ದೆಗಳನ್ನು ಉಳುಮೆ ಮಾಡಲು ಮತ್ತೆ ಎತ್ತುಗಳಗಳೇವು ಕಟ್ಟುತ್ತಾರೆ. ಹೀಗೆ ತಮ್ಮ ಮುಂಗಾರಿನ ಯಶಸ್ಸಿಗೆ ಸಹಕರಿಸುವ ಎತ್ತುಗಳೊಂದಿಗೆ ಈ ಕಾರಹುಣ್ಣಿಮೆಯನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.



ಶೇಖರಯ್ಯ ಟಿ.ಎಚ್. ಎಂ., ಗೆದ್ದಲಗಟ್ಟೆ.

Scan For Digital Colourful
HAMPI TIMES E-paper

ರೈತನನ್ನು "ದೇಶದ ಬೆನ್ನೆಲುಬು" ಎಂದು ಕರೆಯುತ್ತಾರೆ.ರೈತರ ಬೆನ್ನೆಲುಬು ಈ ಎತ್ತುಗಳಾಗಿವೆ. ರೈತನೆಗಲಿಗೆ ಹೆಗಲಾಗಿ ಈ ಎತ್ತುಗಳು ರೈತನ ಹೊಲ ಗದ್ದೆಗಳಲ್ಲಿ ದುಡಿಯುತ್ತವೆ. ಇತ್ತೀಚೆಗೆ ಕೃಷಿ ಚಟುವಟಿಕೆಗಳಿಗೆ ಟ್ರ್ಯಾಕ್ಟರ್‌ನಂತ ಯಂತ್ರೋಪಕರಣಗಳ ಬಳಕೆ ಹೆಚ್ಚಾಗುತ್ತಿದ್ದರೂ, ಬಹಳಷ್ಟು ರೈತರ ಕೃಷಿ ಚಟುವಟಿಕೆಗಳು ಈಗಲೂ ಎತ್ತುಗಳೆ ಆಧಾರವಾಗಿವೆ.

**ಕಾರ ಹುಣ್ಣಿಮೆಯ ದಿನ.....**

ಕಾರಹುಣ್ಣಿಮೆಯಂದು ರೈತರು ತಮ್ಮ ಎತ್ತುಗಳನ್ನು ಊರ ಬಳಿಯ ಕೆರೆಕಟ್ಟೆಗಳಿಗೆ ಹೊಡೆದುಕೊಂಡು ಹೋಗಿ,ಅವುಗಳನ್ನು ಚೆನ್ನಾಗಿ ತಿಕ್ಕಿ ಮೈ ತೊಳೆಯುತ್ತಾರೆ. ನಂತರ ಅವುಗಳ ಕೊಂಬುಗಳಿಗೆ ಬಣ್ಣ ಹಚ್ಚಿ, ಕೊರಳಲ್ಲಿ ಘಂಟೆ,ಗೆಜ್ಜೆಸರಗಳನ್ನು ಕಟ್ಟುತ್ತಾರೆ. ಕೊಂಬುಗಳಿಗೆ ಕೋಡಣಸು ಹಾಕುತ್ತಾರೆ. ಹಣೆಗಳಿಗೆ ಚಿತ್ತಾರದ ಪಟ್ಟಿಗಳನ್ನು ಕಟ್ಟುತ್ತಾರೆ. ಮೈಮೇಲೆ ಮೈಜೂಲುಗಳನ್ನು ಹಾಕುತ್ತಾರೆ. ಮನೆಯೊಳಗಿನ ಕೊಟ್ಟಿಗೆಯ ಗೋದಲಿಗಳನ್ನು ಪೂಜೆ ಮಾಡುತ್ತಾರೆ. ಎತ್ತುಗಳನ್ನು ಗೋದಲಿಗೆ ಕಟ್ಟಿ ಅವಗಳನ್ನು ಭಕ್ತಿ ಭಾವದಿಂದ ಪೂಜಿಸುತ್ತಾರೆ. ನಂತರ ಹಬ್ಬಕ್ಕೆ ತಯಾರಿಸಿದ ಭಕ್ಷ-ಭೋಜ್ಯಗಳನ್ನು ನೈವೇದ್ಯ ಮಾಡಿ ಅವುಗಳಿಗೆ ತಿನ್ನಿಸುತ್ತಾರೆ. ನಂತರ ಮನೆ ಮಂದಿಯೆಲ್ಲ ಕೂಡಿ ಊಟ ಮಾಡುತ್ತಾರೆ. ಸಂಜೆಯ ಸಮಯಕ್ಕೆ ಅವುಗಳನ್ನು ದೇವಸ್ಥಾನದ ಬಳಿ ಹೊಡೆದುಕೊಂಡು ಹೋಗಿ,ಕರೆ ಹರಿದು ತಮ್ಮ ಎತ್ತುಗಳನ್ನು ಕ್ಷೇಮವಾಗಿ ಕಾಪಾಡು ಭಗವಂತ ಎಂದು ದೇವರಲ್ಲಿ ಬೇಡುತ್ತಾರೆ.



ಈ ದಿನದಂದು ಅನೇಕ ಗ್ರಾಮಗಳಲ್ಲಿ ಸಿಂಗಾರಗೊಂಡ ಎತ್ತುಗಳ ಮೆರವಣಿಗೆ ನಡೆಯುತ್ತದೆ. ಕೆಲವು ಗ್ರಾಮಗಳಲ್ಲಿ ಎತ್ತಿನ ಬಂಡಿ ಓಡಿಸುವ ಸ್ಪರ್ಧೆ ಆಯೋಜಿಸುತ್ತಾರೆ. ಹಾಗೆಯೇ ಈ ದಿನ ಎತ್ತುಗಳ ಜೊತೆ ಜೊತೆಗೆ ಉಳಿದ ದನ ಕರುಗಳನ್ನು ಮೈ ತೊಳೆದು, ಅವುಗಳ ಕೊಂಬುಗಳಿಗೂ ಬಣ್ಣ ಬಳಿದು ಪೂಜಿಸುತ್ತಾರೆ. ತರುವಾಯ ಜೋಳದ ಸಂಗಟಿಯೊಂದಿಗೆ ಮೆಣಸು,ಬಜೆ,ಅಜ್ವಾನಗಳಿಂದ ತಯಾರಿಸಿದ ಸಸ್ಯ ಮೂಲ ಔಷಧಿಯನ್ನು ಗೊಟ್ಟಗಳಲ್ಲಿ ಹಾಕಿ ಕುಡಿಸುತ್ತಾರೆ.

**ಕಾರಹುಣ್ಣಿಮೆ ಹಬ್ಬದ ಹಿನ್ನೆಲೆ....**

ಜನಪದ ಕಥೆಯ ಪ್ರಕಾರ ಶಿವನು ಕಾರಹುಣ್ಣಿಮೆಯ ಈ ದಿವಸ ನಂದಿ ಅವತಾರ ತಾಳುತ್ತಾನೆ. ರಾಕ್ಷಸರನ್ನು ತನ್ನ ಕೊಂಬುಗಳಿಂದ ಸಂಹರಿಸಿ ರಕ್ತಸಿಕ್ತ ಕೋಡುಗಳ ಸಮೇತ ಆಗಮಿಸುತ್ತಾನೆ. ಈ ಸಮಯದಲ್ಲಿ ಅವುಗಳ ಕೋಡುಗಳಿಗೆ ರಾಕ್ಷಸರ ಕರುಳುಗಳುಸುತ್ತಿಕೊಂಡಿದ್ದವೆಂದೂ, ಆ ನೆನಪಿಗಾಗಿ ಕಾರ ಹುಣ್ಣಿಮೆ ಯಂದು ಎತ್ತುಗಳ ಕೋಡುಗಳಿಗೆ ಕೆಂಪು ಬಣ್ಣ ಹಚ್ಚಿ, ಕೋಡುಬಳೆ ಹಾಕುವ ಸಂಪ್ರದಾಯವಿದೆ ಎಂದು ಹೇಳುತ್ತಾರೆ.(1)

**ಮಳೆ ಬೆಳೆ ಭವಿಷ್ಯ ಸೂಚಕ ಕಾರಹುಣ್ಣಿಮೆ.....**

ಆ ವರ್ಷದ ಮಳೆ ಬೆಳೆಯ ಭವಿಷ್ಯ ಸೂಚನೆ ಕಾರಹುಣ್ಣಿಮೆಯಲ್ಲಿ ಕಾಣುತ್ತೇವೆ. ಕೆಂಪುಬಣ್ಣದಎತ್ತು ಕರೆ ಹರಿದರೆ ಕೆಂಪು ಧಾನ್ಯಗಳು ಸಮೃದ್ಧವಾಗಿ ಬೆಳೆದು, ಉತ್ತಮ ಮಳೆಯಾಗುವುದು ಮತ್ತು ರೋಗಬಾಧೆಯಾಗದು.ಬಿಳಿಎತ್ತು ಕರೆ ಹರಿದರೆ ಜೋಳ ಕುಸುಬೆಯಂತಹ ಬಿಳಿ ಫಲಗಳು ಸಮೃದ್ಧಿಯಾಗಿ, ಹಿಂಗಾರು ಉತ್ತಮಗೊಳ್ಳುತ್ತದೆ ಎಂಬುದು ರೈತರ ಅನುಭವದ ಮಾತು.(2)

**ಕಾರ ಹುಣ್ಣಿಮೆಯ ಬಸವನ ಸಿಂಗಾರದ ಜನಪದ ಹಾಡು.....**

ಬಸವ ನಿನ್ನ ಹಣೆಯ ಮ್ಯಾಲೆ
ಬೆಳ್ಳಿಯ ಕನ್ನಡಿ ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (1)

ಬಸವ ನಿನ್ನ ಕೋಡಿನ ಮ್ಯಾಲೆ
ಬೆಳ್ಳಿಯ ಕೋಡಣಸು ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (2)

ಬಸವ ನಿನ್ನ ಬೆನ್ನಿನ ಮ್ಯಾಲೆ
ಬಣ್ಣದ ಜೂಲೊಂದ ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (3)

ಬಸವ ನಿನ್ನ ಭುಜದ ಮ್ಯಾಲೆ
ಬಣ್ಣದ ಬೀಸಿಣಿಕೆ ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (4)

ಬಸವ ನಿನ್ನ ಬಾಲದ ಮ್ಯಾಲೆ
ಬೆಳ್ಳಿಯ ಬೀಸಿಣಿಕೆ ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (5)

ಬಸವ ನಿನ್ನ ಪಾದದ ಮ್ಯಾಲೆ
ಬೆಳ್ಳಿಯ ಉರಿಗೆಜ್ಜೆ ಹಾಕ್ಯಾರಂತೆ
ಎಳದು ಮಲಿಗ್ಯಾನ ಬಸವ ದಣುದು ಮಲಿಗ್ಯಾನ...... (6)

(ಈ ಜನಪದ ಗೀತೆಯನ್ನು ಹಾಡಿದವರು ಶ್ರೀಮತಿ ಕೆಂಚಮ್ಮ (65 ವರ್ಷ ವಯಸ್ಸು) ಗೆದ್ದಲಗಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು, ವಿಜಯನಗರ ಜಿಲ್ಲೆ)

**ಕೊನೆಯ ಮಾತು.....**

ಹೀಗೆ ತಮ್ಮ ಹೆಗಲಿಗೆ ಹೆಗಲಾಗಿ ದುಡಿಯುವ ಎತ್ತುಗಳನ್ನು, ಸಾಕಿಸಲುಹಿದ ದನಕರುಗಳನ್ನು ಪೂಜ್ಯಭಾವದಿಂದ ಕಂಡು, ಅವುಗಳ ನಿಸ್ವಾರ್ಥ ಸೇವೆಗೆ ಕೃತಜ್ಞತೆಗಳನ್ನು ಅರ್ಪಿಸುವ ಹಬ್ಬವೇ ಈ ಕಾರಹುಣ್ಣಿಮೆ. ವಿಶೇಷವಾಗಿ ನಮ್ಮ ವಿಜಯನಗರ ಜಿಲ್ಲೆಯ ಕೂಡ್ಲಿಗಿ ಭಾಗದಲ್ಲಿ ಇದನ್ನು ಪ್ರತಿ ಹಳ್ಳಿಯಲ್ಲಿಯೂ ಆಚರಿಸುತ್ತಾರೆ. ಕೆಲವೊಂದು ಹಳ್ಳಿಗಳಲ್ಲಿ ಒಂದೇ ದಿನ ಆಚರಿಸಿದರೆ ಇನ್ನೂ ಕೆಲವು ಹಳ್ಳಿಗಳಲ್ಲಿ "ಕಲೆತಾಗ ಕಾರಹುಣ್ಣಿಮೆ" ಅಂತ ತಮ್ಮ ಅನುಕೂಲಸ್ಥ ದಿನದಂದು ಆಚರಿಸುತ್ತಾರೆ. ನಾವು ಬಾಲಕರಿದ್ದಾಗಲಂತೂ ನಮ್ಮ ಎರಡು ಎತ್ತುಗಳಿಗೆ ಕೊಕ್ಕ-ನೆಟ್ಟ ಎಂದು ಹೆಸರಿಟ್ಟಿದ್ದೆವು. ನಮ್ಮೂರ ಸಮೀಪದ ಉಜ್ಜಮ್ಮನ ಮಡುಗಿನಲ್ಲಿ ಎತ್ತುಗಳ ಮೈ ತೊಳೆಯುತ್ತಿದ್ದೆವು. ಸಂಜೆ ವೇಳೆಗೆ ಅವುಗಳ ಕೊಂಬುಗಳಿಗೆ ಬಣ್ಣ ಬಳಿದು ಪೂಜಿಸುತ್ತಿದ್ದೆವು. ಮನೆಯಲ್ಲಿ ತಯಾರಿಸಿದ ನೈವೇದ್ಯವನ್ನು ಅವುಗಳಿಗೆ ತಿನ್ನಿಸುತ್ತಿದ್ದೆವು. ಈಗಲೂ ಆ ಹಬ್ಬದ ಕ್ಷಣಗಳು ಕಣ್ಮುಂದೆ ಕಟ್ಟಿದಂತಿವೆ. ಪ್ರಸ್ತುತ ದಿನಮಾನಗಳಲ್ಲಿ ದನಕರುಗಳನ್ನು ಸಾಕುವವರು ಕಡಿಮೆಯಾಗಿದ್ದಾರೆ. ಉಳುಮೆಯ ಕೆಲಸವನ್ನು ಟ್ರ್ಯಾಕ್ಟರ್ ಗಳು ಮಾಡುತ್ತಿವೆ. ಹೀಗಿದ್ದರೂ ದನ ಕರುಗಳನ್ನು ಸಾಕಿಕೊಂಡಿರುವ ಹಲವು ರೈತರು ಈಗಲೂ ಈ ಹಬ್ಬವನ್ನು ಭಕ್ತಿ-ಭಾವದಿಂದ,ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಈ ಸಂಭ್ರಮವನ್ನು ಆನಂದಿಸುತ್ತಾರೆ. ಉಳಿದವರು ಮನೆಯಲ್ಲಿ ಸಿಹಿ ಊಟ ತಯಾರಿಸಿ, ಎತ್ತಿನ ಮಣ್ಣಿನ ಮೂರ್ತಿಗಳಿಗೆ ಪೂಜೆ ಮಾಡುತ್ತಾರೆ. (ಅಡಿ ಟಿಪ್ಪಣಿಗಳು.... 1) ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು.... ಲೇಖಕರು ಡಾ. ಎ.ಎನ್. ಸಿದ್ದೇಶ್ವರಿ. ಪುಟ ಸಂಖ್ಯೆ 143-144 2) ಇದೇ ಪುಸ್ತಕದ ಪುಟ ಸಂಖ್ಯೆ 143-144.)

# ಶಾಲಾ ಅಂಗಳದಲ್ಲಿ ಗರಿಗೆದರಿವೆ ಶೈಕ್ಷಣಿಕ ಚಟುವಟಿಕೆಗಳು

ಅಂತೂ ಬೇಸಿಗೆ ರಜೆ ಮುಗಿದೆ ಹೋಯಿತು. ಜೂನ್ ತಿಂಗಳಿನ ಆಗಮನ ಆಗಿಯೇ ಬಿಟ್ಟಿತು. ಈ ತಿಂಗಳು ಎಲ್ಲರಿಗೂ ಸಂಭ್ರಮ. ಬೇಸಿಗೆ ಬಿಸಿಲಿನ ತಾಪಕೆ ತತ್ತರಿಸಿದ ನಮಗೆಲ್ಲ ಮಳೆರಾಯ, ಆಗಾಗ ಭೂಮಿಗೆ ಇಳಿದು ತಂಪೆರೆಯುವ ಸಮಯ. ಬಿಸಿಲಿಗೆ ಬಾಡಿದ ಮರ ಗಿಡಗಳೆಲ್ಲ ಮಳೆರಾಯನಿಗೆ ಕೃತಜ್ಞತೆ ಸಲ್ಲಿಸುವ ಸಮಯ. ರೈತರಿಗೆ ಹೊಲಗಳನ್ನೆಲ್ಲ ಹದಗೊಳಿಸಿ ಬಿತ್ತನೆ ಶುರು ಮಾಡುವ ಸಮಯ. ಎಲ್ಲದಕ್ಕೂ ಹೆಚ್ಚಾಗಿ ಎರಡು ತಿಂಗಳಿನಿಂದ ಮನೆಯಲ್ಲಿದ್ದ ಮಕ್ಕಳನ್ನೆಲ್ಲ ಶಾಲೆಗೆ ಕಳಿಸುವ ಸಂಭ್ರಮ. ಮಕ್ಕಳಿಗೆಲ್ಲ ತಮ್ಮ ತರಗತಿ ಸ್ನೇಹಿತರನ್ನು ಭೇಟಿಯಾಗುವ, ಶಾಲಾ ಮೈದಾನದಲ್ಲಿ ಆಟವಾಡುವ ತವಕ. ಮತ್ತೆ ಮುಂದಿನ ತರಗತಿ ಕೊಠಡಿಯಲ್ಲಿ ಕುಳಿತುಕೊಳ್ಳುವ ಆತುರ. ಇನ್ನು ಶಿಕ್ಷಕರಿಗಂತೂ ಮಕ್ಕಳೆ ಅವರ ಜೀವಾಳ. ಜೂನ್ ತಿಂಗಳೆಂದರೆ ಶಾಲಾ ಪ್ರಾರಂಭೋತ್ಸವದ ತಿಂಗಳು.



ಉಮಾ ಗವೀಶ ಕಲ್ಮಠ. ಶಿಕ್ಷಕಿ, ಅಳವಂಡಿ

Scan For Digital Colourful
HAMPI TIMES E-paper

ಆರಂಭದಲ್ಲಿ ಶಾಲಾ ಮೈದಾನದ ಸ್ವಚ್ಛತೆ, ಕೊಠಡಿಗಳ ಸ್ವಚ್ಛತೆ, ಅಡುಗೆ ಕೋಣೆಯ ಸ್ವಚ್ಛತೆ, ಧಾನ್ಯಗಳ ಸ್ವಚ್ಛತೆ, ನೀರಿನ ಪರೀಕ್ಷೆ, ಶೌಚಾಲಯಗಳ ಸ್ವಚ್ಛತೆ, ಇವೆಲ್ಲವುಗಳ ಸ್ವಚ್ಛತೆಯ ನಂತರ ಶಾಲೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ಬಲೂನುಗಳಿಂದ ಅಲಂಕರಿಸಿ, ತೆಂಗಿನಗರಿ ಗಳಿಂದ ಶೃಂಗಾರಗೊಳಿಸಿ, ಬಿಸಿ ಊಟದಲ್ಲಿ ಸಿಹಿ ಅಡುಗೆ ಬಡಿಸಿ, ಸಮವಸ್ತ್ರ, ಪಠ್ಯಪುಸ್ತಕಗಳನ್ನು ವಿತರಿಸಿ, ಹೊಸ ದಾಖಲಾತಿಗಳನ್ನು ಮಾಡುತ್ತಾ, ಆ ಶಾಲೆಯಿಂದ ಬೇರೆಡೆಗೆ ಹೋಗುತ್ತಿರುವ ಮಕ್ಕಳ ವರ್ಗಾವಣೆ ಪತ್ರ ಕೊಡುತ್ತ, ಇವೆಲ್ಲವುಗಳ ಜೊತೆ ಸೇತುಬಂಧ ನಡೆಸುತ್ತಾ, ಸಾಗುತ್ತಿದೆ ಈ ತಿಂಗಳು. ಸಾಫಲ್ಯ ಪರೀಕ್ಷೆ, ನೈದಾನಿಕ ಪರೀಕ್ಷೆಗಳ ನಂತರ ಪಠ್ಯಕ್ರಮ ಶುರುವಾಗುತ್ತೆ. ಜೂನ್ ತಿಂಗಳ ಶುರುವಾಗುತ್ತಲೇ ಮಕ್ಕಳ ಪೋಷಕರ ಚಟುವಟಿಕೆಗಳು ಕೂಡ ಶುರುವಾಗುತ್ತವೆ. ಮಕ್ಕಳನ್ನು ಯಾವ ಶಾಲೆಗೆ ಸೇರಿಸುವುದು? ಯಾವ ಕೋರ್ಸುಗಳಿಗೆ ಸೇರಿಸುವುದು? ದಾಖಲಾತಿಗೆ ಸಂಬಂಧ ಪಟ್ಟಂತೆ ದಾಖಲಾತಿಗಳನ್ನು ಸಿದ್ಧಪಡಿಸಿಕೊಳ್ಳುವುದು. ಮಕ್ಕಳ ಸಮವಸ್ತ್ರಗಳನ್ನು, ಪುಸ್ತಕಗಳನ್ನು, ನೋಟ್ ಪುಸ್ತಕಗಳನ್ನು ಇನ್ನು ಹಲವಾರು ರೀತಿಯ ತಯಾರಿಕೆಯಲ್ಲಿ ಪೋಷಕರು ಶ್ರಮವಹಿಸುತ್ತಾರೆ ಹಾಗೆಯೇ ವಿದ್ಯಾರ್ಥಿಗಳಿಗೂ ಒಂದು ತರಹದ ಸಂಭ್ರಮ ಮತ್ತೊಂದು ತರದಲ್ಲಿ ಗೊಂದಲ ಉಂಟಾಗುತ್ತದೆ. ಒಂದರಿಂದ 10ನೇ ತರಗತಿ ಮಕ್ಕಳಿಗೆ ಯಾವುದೇ ಗೊಂದಲ ಇರದು. ಅವರು ಮುಂದಿನ ತರಗತಿಗೆ ಹೋಗಿ ಕುಳಿತುಕೊಳ್ಳುವ ಸಂಭ್ರಮ. ಆದರೆ ಹತ್ತನೇ ತರಗತಿ ಮುಗಿಸಿದ ಮತ್ತು ಪಿಯುಸಿ ಮುಗಿಸಿದ ವಿದ್ಯಾರ್ಥಿಗಳಲ್ಲಿ ಗೊಂದಲ ಶುರುವಾಗುತ್ತದೆ. ಯಾವ ಕೋರ್ಸ್ ಮಾಡಿದರೆ ತನಗೆ ಮುಂದೆ ಅನುಕೂಲವಾಗುತ್ತದೆ ಎಂಬ ವಿಚಾರಗಳು. ಅದರ ಆಗು ಹೋಗುಗಳು ಅವರನ್ನು ಕಾಡುತ್ತಿರುತ್ತವೆ. ಒಮ್ಮೆ ಅವರು ತೆಗೆದುಕೊಂಡ ನಿರ್ಧಾರಗಳು ತಪ್ಪಾದರೆ ಪಶ್ಚಾತಾಪಟ್ಟುಕೊಳ್ಳಬೇಕಾಗುತ್ತದೆ. ನಿಧಾನವೇ ಪ್ರಧಾನ ಎನ್ನುವಂತೆ ತೆಗೆದುಕೊಳ್ಳುವ ನಿರ್ಧಾರಗಳು ಗಟ್ಟಿಯಾಗಿರಲಿ. ನಿಮ್ಮ ಭಾವಿ ಭವಿಷ್ಯಕ್ಕೆ ಪೂರಕವಾಗಿರಲಿ. ಬದುಕಿನಲ್ಲಿ ಎಲ್ಲಾ ಯಶಸ್ವಿಗೂ ಔಷಧಿಗಳಿವೆ. ಒಂದು ವಿದ್ಯೆ,ಇನ್ನೊಂದು ದುಡಿಮೆ, ಮತ್ತೊಂದು ತಾಳ್ಮೆ.



ಹಾಗಾಗಿ ವಿದ್ಯೆಯೆಂಬುದು ಬೆಲೆ ಕಟ್ಟಲಾಗದ ಆಸ್ತಿ. ಅದನ್ನು ಗಳಿಸಿ,ಬೆಳೆಸಿಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯ. ಬದುಕು ಅನ್ನೋ ಹೊಲದಲ್ಲಿ ಸಮಸ್ಯೆ ಎಂಬ ಕಳೆಯು ಬೆಳೆಯುತ್ತಲೇ ಇರುತ್ತೆ ಹಾಗಂತ ಹೊಲ ಬಿಟ್ಟು ಹೋಗಕಾಗುತ್ತಾ? ಕಳೆ ಕೀಳುವ ಕಲೆ ಕಲಿತು ಬಾಳಬೇಕು ಇಂತಹ ಕಲೆಗಳನ್ನು ಕಲಿಸುವುದು ಶಿಕ್ಷಣ. ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಹಕ್ಕಾಗಿದೆ.ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳನ್ನು ನಿರಂತರವಾಗಿ ಶಾಲೆಗೆ ಕಳಿಸಿ, ಅವರ ಕಾರ್ಯ ಚಟುವಟಿಕೆಗಳ ಕಡೆ ಗಮನ ಹರಿಸಬೇಕು. ನೀವು ಮಕ್ಕಳಿಗಾಗಿ ಗಳಿಸುವ ಭೌತಿಕ ಆಸ್ತಿಗಿಂತ ಅವರು ಪಡೆಯುವ ವಿದ್ಯೆ ದೊಡ್ಡ ಆಸ್ತಿಯಲ್ಲವೇ ನೀವು ಏನಂತೀರಿ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055




# ಪರಿಸರ ದಿನಾಚರಣೆ ಮುಗಿಯಿತು... ಮುಂದೇನು?



ಪರಿಸರ ಉಳಿಸಿ ಎಂಬ ಕೂಗು ಕೇವಲ ಭಿತ್ತಿ ಪತ್ರಗಳಲ್ಲಿ ಮಾತ್ರವಲ್ಲ.... ಕಳೆದ ಎರಡು ದಶಕಗಳಿಂದ ಈ ಕೂಗು ಆರಂಭವಾಗಿದೆ. ನಮ್ಮ ಭೂಮಿಯನ್ನು ಸೂರ್ಯನ ವಿಕಿರಣಗಳಿಂದ ತಡೆಗಟ್ಟುವ ಓಜೋನ್ ಪದರವು ಛಿದ್ರವಾಗಿದ್ದು ಚರ್ಮಕ್ಕೆ ಸಂಬಂಧಪಟ್ಟ ತೊಂದರೆಗಳಿಗೆ ಜನರು ಈಡಾಗುತ್ತಾರೆ ಎಂಬ ಭಯ ಭೂಮಿಯ ವಾಸಿಗಳಿಗೆ ಇತ್ತು.

ಕೇವಲ ಒಂದು ಶತಮಾನದ ಹಿಂದೆ ನಮ್ಮ ಎಲ್ಲಾ ಹಳ್ಳಿಗಳ ಕೆರೆ ಕಟ್ಟೆಗಳು ಸ್ವಚ್ಛವಾಗಿದ್ದವು. ದನ ಕರುಗಳನ್ನು ತೊಳೆಯುವ,ಬಟ್ಟೆಗಳನ್ನು ಸೆಳೆಯುವ ರೈತಾಪಿ ಕೆಲಸ ಕಾರ್ಯಗಳಿಗೆ ನೆರವಾಗುವ ಕೆರೆಕಟ್ಟೆಗಳು ಇಂದು ಇಲ್ಲವೇ ಇಲ್ಲ ಎಂಬ ಮಟ್ಟಿಗೆ ನಮ್ಮ ಬದುಕು ನಿಂತಿದೆ.

ಪರಿಸರ ದಿನಾಚರಣೆಯನ್ನು ಜೂನ್ 5ರಂದು ಪ್ರತಿ ವರ್ಷ ನಾವು ಆಚರಿಸುತ್ತೇವೆ. ಪ್ರತಿಯೊಂದು ಜಿಲ್ಲೆ, ತಾಲೂಕು ಗಳ ಮುಖ್ಯ ಕಚೇರಿಗಳಲ್ಲಿ ಶಾಲೆ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳ ಕಟ್ಟಡಗಳಲ್ಲಿ ಪರಿಸರ ದಿನಾಚರಣೆಯ ದೊಡ್ಡ ದೊಡ್ಡ ಬ್ಯಾನರ್ ಗಳನ್ನು ಕಟ್ಟಿ ನಿಗದಿತ ಜಾಗದಲ್ಲಿ ಗಿಡವನ್ನು ನೆಟ್ಟು ಚಂದದ ಫೋಟೋಕ್ಕೆ ಫೋಸ್ ಕೊಟ್ಟು ಪತ್ರಿಕೆಗಳಿಗೆ ಈ ವಿಷಯವನ್ನು ಕಳುಹಿಸಿ ಮರುದಿನದ ಪತ್ರಿಕೆಯಲ್ಲಿ ಆ ವಿಷಯ ಪ್ರಕಟವಾದರೆ ಆ ವರ್ಷದ ಪರಿಸರ ದಿನಾಚರಣೆ ಸಾರ್ಥಕ ಎಂಬ ಭಾವ ನಮ್ಮ ಜನರಲ್ಲಿ!

ಪ್ರತಿದಿನ, ಪ್ರತಿ ಕ್ಷಣ, ಒಂದೊಂದು ಮಗು ಹುಟ್ಟುವ ನಮ್ಮ ದೇಶದಲ್ಲಿ ಇನ್ನೂ 500 ಕೋಟಿ ಗಿಡಗಳು ಬೇಕು ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಪರಿಸರ ದಿನಾಚರಣೆಯ ಮಹತ್ವವನ್ನು ನಾವು ವಿಶ್ಲೇಷಿಸಿ ನೋಡೋಣ.

ಇದೇ ರೀತಿ ಆಧುನೀಕರಣದ ಭರಾಟೆ ಮುಂದುವರೆದರೆ ರಸ್ತೆಗಳನ್ನೆಲ್ಲ ಕಾಂಕ್ರೀಟ್ ಮಯವನ್ನಾಗಿಸಿ ಮಳೆಯ ನೀರು ಇಂಗದಂತೆ ನೆಲಕ್ಕೆಲ್ಲ ಕಾಂಕ್ರೀಟ್ ಹಾಸನ್ನು ಹಾಸಿ ಮಳೆ ಬಂದಾಗ ನೀರು ಇಲ್ಲದಂತೆ ಮಾಡಿದ್ದು ಯಾರು? ನಮ್ಮ ಅವೈಜ್ಞಾನಿಕ ಮಾದರಿಯ ರಸ್ತೆ ಕಾಮಗಾರಿಗಳು ಮತ್ತು ಅದಕ್ಕೆ ಪರವಾನಿಗೆ ಕೊಟ್ಟ ಅಧಿಕಾರಿಗಳು ಅಲ್ಲವೇ?

ಹಾಗಾದ್ರೆ ಮೋಡದಿಂದ ಸುರಿದ ಮಳೆ ಹೋಗಿ ಸೇರಿದ್ದು ಎಲ್ಲಿಗೆ? ಎಂದು ಕೇಳಿದಾಗ ತಗ್ಗು ಪ್ರದೇಶದ ಮನೆಗಳಿಗೆ, ಚರಂಡಿಗಳಿಗೆ ಎಂಬ ಉತ್ತರ ದೊರೆಯಬಹುದು. ಬಹುತೇಕ ತಗ್ಗು ಪ್ರದೇಶದಲ್ಲಿರುವ ಮನೆಗಳು ಇರುವ ಜಾಗದಲ್ಲಿ ಈ ಮೊದಲು ಕೆರೆಕಟ್ಟೆಗಳು ಇದ್ದು ಬದಲಾದ ಪರಿಸ್ಥಿತಿಯಲ್ಲಿ ಜನವಸತಿಗೆ ಅನುಕೂಲವಾಗುವಂತೆ ಈ ಕೆರೆಗಳನ್ನು ಮುಚ್ಚಿಹಾಕಿ ಅವುಗಳ ಜಾಗದಲ್ಲಿ ವಸತಿ ನಿರ್ಮಿಸಿಕೊಳ್ಳಲು ನಿವೇಶನಗಳನ್ನು ಮಾಡಿಕೊಟ್ಟವರು ಯಾರು? ಹಾಗೆ ಅ ನಿವೇಶನಗಳನ್ನು ಮಾಡಲು ಪರವಾನಿಗೆ ಕೊಟ್ಟವರು ಯಾರು? ಎಂಬ ಪ್ರಶ್ನೆಗೆ ಉತ್ತರ ಕೊಡುವವರು ಯಾರು.

ರಸ್ತೆ ಅಗಲೀಕರಣಕ್ಕೆ ತೊಂದರೆ ಉಂಟು ಮಾಡುವ ದೊಡ್ಡ ದೊಡ್ಡ ಮರಗಳಿಗೆ ಕೊಡಲಿ ಹಾಕಿ, ವರ್ಷಕ್ಕೊಮ್ಮೆ ಅಲ್ಲಲ್ಲಿ ಪುಟ್ಟ ಸಸಿಯನ್ನು ನೆಟ್ಟು ಪರಿಸರ ದಿನಾಚರಣೆಯನ್ನು ಕೈಗೊಳ್ಳುವ ವಂದಿಮಾಗಧರೆ ಇರಲಿ, ಜನಸಾಮಾನ್ಯರೇ ಇರಲಿ ಅವರೆಲ್ಲರಿಗೂ ಗೊತ್ತಿರುವ ಸತ್ಯ ಸಂಗತಿ ಅದೆಷ್ಟೇ ನೀರು ಗೊಬ್ಬರ ಹಾಕಿದರೂ ಪುಟ್ಟ ಸಸಿ ಗಿಡವಾಗಿ ನಂತರ ಹೆಮ್ಮರವಾಗಿ ಬೆಳೆಯಲು ವರ್ಷಗಳೇ ಬೇಕು.

ನೆಡದ, ಪಾಲಿಸದ ನಮಗೆ ಕತ್ತರಿಸಲು ಅವಕಾಶ ಮಾಡಿಕೊಟ್ಟವರು ಯಾರು?

ಖನಿಜಗಳನ್ನು ಹೊರತೆಗೆಯುವ ನಿಟ್ಟಿನಲ್ಲಿ ದೊಡ್ಡ ದೊಡ್ಡ ಪರ್ವತಗಳನ್ನು ಅಗಿದು ನೆಲಸಮ ಮಾಡಿರುವ ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದಂತೆ ಕಾರ್ಯಗಳು ನಡೆದಿವೆ. ಆದರೆ ಈ ರೀತಿಯ ಕಾಮಗಾರಿಗಳಿಂದ ವ್ಯವಸಾಯ ಯೋಗ್ಯ ಕೃಷಿ ಭೂಮಿಗಳು ನಾಶವಾಗಿದ್ದು ದೊಡ್ಡ ದೊಡ್ಡ ಬೆಟ್ಟ ಗುಡ್ಡಗಳು ಕಾಣೆಯಾಗಿವೆ. ಸ್ನೇಹಿತರೆ ಇಡೀ ಭಾರತ ದೇಶದ 140 ಕೋಟಿ ಜನ ಮೊಣಕಾಲೂರಿ ಬಗ್ಗಿ ಆ ದೇವರನ್ನು ಪ್ರಾರ್ಥಿಸಿದರೂ ಒಂದು ಬೆಟ್ಟವನ್ನು ನಾವು ಸೃಷ್ಟಿಸಲು ಸಾಧ್ಯವಿಲ್ಲ ಒಂದು ನದಿಯನ್ನು ಹರಿಸಲು ಸಾಧ್ಯವಿಲ್ಲ.

ಬ್ರಹ್ಮಾಂಡವು ನಮಗೆ ನೀಡಿರುವ ಅತಿ ದೊಡ್ಡ ಉಡುಗೊರೆ ನಾವಿರುವ ಪರಿಸರ ಚಿಕ್ಕ ಪುಟ್ಟ ಹುಡುಗರೇಗಳನ್ನು ಅತ್ಯಂತ ಜತನವಾಗಿ ಕಾಯ್ದುಕೊಳ್ಳುವ ನಾವುಗಳು ನಮ್ಮ ಈ ಪರಿಸರವನ್ನು ಹಾಳಾಗಲು ಬಿಟ್ಟದ್ದಾದರೂ ಹೇಗೆ ?

ಪರಿಸರ ಮತ್ತು ಮನುಷ್ಯನಿಗೆ ಇರುವ ಅವಿನಾಭಾವ ಸಂಬಂಧದ ಕಾರಣ ಒಬ್ಬರಿಗೊಬ್ಬರು ಪೂರಕವಾಗಿ ಬದುಕಿದರೆ ಮಾತ್ರ ಇಬ್ಬರೂ ಉಳಿಯುತ್ತಾರೆ ಇಲ್ಲವಾದರೆ ಇಬ್ಬರೂ ನಾಶವಾಗಿ ಹೋಗುತ್ತಾರೆ ಎಂಬುದು ಅರಿಯದ ಸತ್ಯವೇನಲ್ಲ.. ಮನೆಯ ಒಳಭಾಗದಲ್ಲಿ ಪುಟ್ಟದೊಂದು ಹಕ್ಕಿ ಬಂದು ಕುಳಿತರೂ ಉಶ್ ಎಂದು ಓಡಿಸುವ ನಮಗೆ ಆ ಪಕ್ಷಿಯಂತೆ ನಮ್ಮದೇ ಆದ ಗೂಡನ್ನು ಕಟ್ಟುವ ಕಲೆ ಗೊತ್ತಿಲ್ಲ. ತನ್ನ ಮಡಿಲಲ್ಲಿ ಅಂತಹ ಸಾವಿರಾರು ಪಕ್ಷಿಗಳಿಗೆ ಜಾಗ ಕೊಡುವ ಮರವನ್ನು ನಾವು ಕಡಿದರೆ ಅದು ಮತ್ತೆಲ್ಲಿಗೆ ಹೋಗಬೇಕು?

ಆಗಾಗ ಕಾಡು ಪ್ರಾಣಿಗಳು ಹತ್ತಿರದ ಊರುಗಳಿಗೆ ಬಂದು ದಾಂಧಲೆ ಎಬ್ಬಿಸುತ್ತವೆ ಎಂಬ ಹುಯಿಲನ್ನು ನಾವು ಕೇಳುತ್ತೇವೆ. ಹಾಗೆ ಪ್ರಾಣಿಗಳು ಮಾಡಲು ಕಾರಣ ಈ ಮಂಚೆ ಅವುಗಳು ವಾಸಿಸುತ್ತಿದ್ದ ಸ್ಥಳವನ್ನು ಒತ್ತುವರಿ ಮಾಡಿಕೊಂಡು ಕಾಡನ್ನು ನಾಡಾಗಿಸಿರುವುದರ ಪರಿಣಾಮವಾಗಿ ಅವುಗಳು ಕಾಡಿನ ಒಳಭಾಗದಲ್ಲಿ ಸೇರಿಕೊಂಡಿವೆ ಎಂಬುದು ನಿಜ ಆದರೆ ಅವುಗಳ ದೇಹದ ಕಣ ಕಣದಲ್ಲಿಯೂ ಇರುವ ತಮ್ಮ ಹಿಂದಿನ ದಿನಗಳ ವಾಸದ ನೆನಪಿನ ಜಾಡು ಹಿಡಿದು ಅವು ನಾಡಿನತ್ತ ಧಾವಿಸಿ ಬರುತ್ತವೆ, ಮತ್ತೆ ಕೆಲವೊಮ್ಮೆ ಆಹಾರ, ನೀರನ್ನು ಹುಡುಕಿ ಬರುತ್ತವೆ. ಬುದ್ಧಿಜೀವಿಗಳಾದ ನಾವು ನಮ್ಮ ನೆಲೆಯನ್ನು ಉಳಿಸಿಕೊಳ್ಳಲು ಅವುಗಳ ನೆಲೆಯನ್ನು ಕಸಿದುಕೊಂಡಿ ರುವುದು ತಪ್ಪಲ್ಲವೇ?



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ನಮಗೆ ಅನ್ಯಾಯವಾದರೆ ಸಮಾಜ, ಹಿರಿಯರು, ಪೊಲೀಸರು, ನ್ಯಾಯಾಲಯ ಎಂದು ನಾವು ದೂರು ಹೇಳುತ್ತೇವೆ! ಪ್ರಾಣಿ–ಪಕ್ಷಿಗಳಿಗೆ ನೋವಾದರೆ ಅವು ಎಲ್ಲಿಗೆ ಹೋಗಬೇಕು?

ಕೆಲವೇ ವರ್ಷಗಳ ಹಿಂದೆ ಮೋಡಗಳ ಘರ್ಷಣೆಯಿಂದ ಪ್ರವಾಹದೋಪಾದಿಯಲ್ಲಿ ಮಳೆಯಾಗಿ ಚಾರ್ ಧಾಮಗಳಲ್ಲಿ ಒಂದಾದ ಕೇದಾರನಾಥ ಕ್ಷೇತ್ರದಲ್ಲಿ ಭೂಕುಸಿತ, ಪ್ರವಾಹ ಎಲ್ಲವೂ ಉಂಟಾದವು, ಸಾಕಷ್ಟು ಜನರ ಪ್ರಾಣ ಹಾನಿಗೆ ಕಾರಣವಾಯಿತು. ಇದಕ್ಕೆ ಕಾರಣವನ್ನು ಹುಡುಕುತ್ತಾ ಹೋದರೆ ಸೆಡಿಮೆಂಟರಿ ರಾಕ್ ಎಂದು ನಾವು ಹೇಳುವ

ಅಷ್ಟೇನು ಗಟ್ಟಿಯಲ್ಲದ ಭೂಮಿಯನ್ನು ಹೊಂದಿರುವ ಆ ಭಾಗದಲ್ಲಿ ಅತಿ ಹೆಚ್ಚು ರಸ್ತೆ ಕಾಮಗಾರಿಗಳು ಮತ್ತು ಜಲಾಶಯಗಳನ್ನು ಕಟ್ಟುವ ಕಾರ್ಯವನ್ನು ಮಾಡಲಾಯಿತು. ಭಾರಿ ತೂಕದ ವಾಹನಗಳು ಕ್ರೇನ್ ಗಳು, ಜೆಸಿಬಿಗಳು ಮತ್ತು ಕಟ್ಟಡ ಕಾಮಗಾರಿ ಯಂತ್ರೋಪಕರಣಗಳು ಆ ಪರ್ವತ ಪ್ರದೇಶಗಳಲ್ಲಿ ಓಡಾಡಿದ ಪರಿಣಾಮ ಅಲ್ಲಿನ ಭೂಮಿಯಲ್ಲಿ ಕುಸಿತ ಉಂಟಾಗಲು ಕಾರಣವಾದರೆ ಮೋಡಗಳು ಸರಿಯಲು ಸಾಧ್ಯವಿಲ್ಲದಷ್ಟು ಎತ್ತರದ ಪರ್ವತಗಳ ನಡುವೆ ಅಪಾರ ಪ್ರಮಾಣದ ಘನೀಭವಿಸಿದ ನೀರನ್ನು

ಹೊತ್ತ ಮೋಡಗಳು ಸಿಲುಕಿಕೊಂಡು ಪ್ರತಿಕೂಲ ವಾತಾವರಣದ ಕಾರಣದಿಂದಾಗಿ ಮೇಘ ಸ್ಫೋಟವಾಗಿ ಪ್ರವಾಹ ಉಂಟಾಗಿ ಸಾವಿರಾರು ಜನ ಆ ಪ್ರವಾಹದಲ್ಲಿ ಕೊಚ್ಚಿ ಹೋದರು. ನೂರಾರು ಜನ ಮರಣ ಹೊಂದಿದರು. ಇಡೀ ಕ್ಷೇತ್ರದ ಜನ ತಮ್ಮ ಮನೆ, ಆಸ್ತಿ ಪಾಸ್ತಿಯನ್ನು ಕಳೆದುಕೊಂಡು ಅಕ್ಷರಶಹ ನಿರ್ಗತಿಕರಾದರು,.ಮತ್ತೆ ಕೆಲವರ ಭವ್ಯ ಭವಿಷ್ಯ ಮುರುಟಿ ಹೋಯಿತು.

ಇನ್ನು ನಾವು ವಾಸಿಸುತ್ತಿರುವ ಈ ಭೂಮಿಯನ್ನು ತಾಯಿ ಎಂದು ಪೂಜಿಸುವ ಜನನಿ, ಜನ್ಮ ಭೂಮಿ ಎಂದು ಪ್ರೀತಿಯಿಂದ ಭಕ್ತಿಯಿಂದ ಕರೆಯುವ ನಾವು ನಿಜವಾಗಿಯೂ ಆಕೆಯ ಮಕ್ಕಳಾಗಲು ಯೋಗ್ಯರೇ!? ಎಂದು ಪ್ರಶ್ನಿಸಿಕೊಂಡಾಗ ಖಂಡಿತವಾಗಿಯೂ ಇಲ್ಲ ಎಂಬ ಉತ್ತರ ಮುಖಕ್ಕೆ ರಾಚುತ್ತದೆ. ಯಾರಾದರೂ ತನ್ನ ತಾಯಿಯ ಮಡಿಲನ್ನು ಮಲಿನಗೊಳಿಸುತ್ತಾರೆಯೇ? ಕಸ ಸುರಿಯುತ್ತಾರೆಯೇ ಉಸಿರಿಗೆ ವಿಷ ಬೆರೆಸುತ್ತಾರೆಯೇ ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತದೆ ಅಲ್ಲವೇ ?

ಬೃಹತ್ತಾದ ಕಾರ್ಖಾನೆಗಳು ತಮ್ಮ ಕಾರ್ಖಾನೆಯಿಂದ ಹೊರಬರುವ ತ್ಯಾಜ್ಯಗಳನ್ನು ನದಿಗಳಿಗೆ ಹರಿಯಬಿಡುತ್ತಾರೆ. ಆ ಮೂಲಕ ನದಿ ನೀರಿನಲ್ಲಿರುವ

ಜಲಚರಗಳಿಗೆ ಉಸಿರುಗಟ್ಟುವಂತೆ ಮಾಡುತ್ತಾರೆ ಮಾತ್ರವಲ್ಲ, ಆ ನೀರನ್ನು ಸೇವಿಸುವ ಜನರು ವಿವಿಧ ರೀತಿಯ ಶ್ವಾಸಕೋಶ ಸಂಬಂಧಿ ಮತ್ತು ಚರ್ಮ ಸಂಬಂಧಿ ರೋಗಗಳಿಗೆ ಈಡಾಗುವಂತೆ ಮಾಡುತ್ತಾರೆ.

ಒಳ್ಳೆಯ ಬೆಳೆಯನ್ನು ಪಡೆಯಲು ರೈತರು ಅತಿ ಹೆಚ್ಚು ಕ್ರಿಮಿನಾಶಕ ಮತ್ತು ರಾಸಾಯನಿಕಗಳನ್ನು ಬಳಸುತ್ತಿರುವುದರಿಂದ ಭೂಮಿಯು ತನ್ನ ಸತ್ವವನ್ನು ಕಳೆದುಕೊಂಡು ಬಂಜರಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶದ ಬಹಳಷ್ಟು ಭೂಪ್ರದೇಶವು ಸಾಗುವಳಿಗೆ ಯೋಗ್ಯವಲ್ಲದ ಸ್ಥಿತಿಯನ್ನು ತಲುಪುತ್ತದೆ ಎಂದರೆ ಆಶ್ಚರ್ಯವಿಲ್ಲ.. ಮನುಷ್ಯನ ಅತಿಯಾದ ಆಸೆ ಆತನನ್ನು ಅವೈಜ್ಞಾನಿಕ ರೀತಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವತ್ತ ದೂಡುತ್ತಿದೆ. ಹೆಚ್ಚು ಲಾಭಗಳಿಸುವ ನಿಟ್ಟಿನಲ್ಲಿ ರೈತರು ಅಗತ್ಯಕ್ಕಿಂತ ಹೆಚ್ಚು ರಾಸಾಯನಿಕಗಳಗಳನ್ನು ಮತ್ತು ಗೊಬ್ಬರಗಳನ್ನು ಬಳಸುತ್ತಿರುವುದರ ಪರಿಣಾಮವಾಗಿ ಭೂಮಿಯು ಫಲವತ್ತತೆಯನ್ನು ಕಳೆದುಕೊಂಡಿದೆ.

ಇನ್ನು ಫ್ಯಾಕ್ಟರಿಗಳು, ವಾಹನಗಳು ಹೊರ ಹಾಕುವ ಹೊಗೆಯಿಂದಾಗಿ ಇಂಗಾಲದ ಆಮ್ಲ ಪರಿಸರಕ್ಕೆ ಹಾನಿಯನ್ನು ಉಂಟುಮಾಡುತ್ತಿದೆ. ಇಂಗಾಲದ ಆಮ್ಲ ವನ್ನು ಹೀರಿಕೊಳ್ಳುವಷ್ಟು ಸಸ್ಯ ಸಂಕುಲ ನಮ್ಮಲ್ಲಿ ಇಲ್ಲದೆ ಇರುವ ಕಾರಣ ನಮ್ಮ ಸುತ್ತಲ ವಾತಾವರಣ ಅತ್ಯಂತ ಕಲುಷಿತವಾಗಿದೆ. ವಾಯು ಮಾಲಿನ್ಯ ಹೆಚ್ಚಾಗಿದೆ. ಅದರಲ್ಲೂ ಅತಿಯಾದ ಟ್ರಾಫಿಕ್ ನಿಂದಾಗಿ ದೇಶದ ರಾಜಧಾನಿ ದೆಹಲಿಯಲ್ಲಿ ಅತಿಹೆಚ್ಚಿನ ವಾಯುಮಾಲಿನ್ಯ ಉಂಟಾಗಿದ್ದು 50 ವರ್ಷ ಮೇಲ್ಪಟ್ಟ ಎಲ್ಲರಿಗೂ ವಾಯು ಮಾಲಿನ್ಯವು ಅಸ್ತಮಾ, ದಮ್ಮು, ಕೆಮ್ಮು, ಮುಂತಾದ ಉಸಿರಾಟ ಸಂಬಂಧಿ ತೊಂದರೆಗಳಿಂದ ಮತ್ತು ಚರ್ಮ ಸಂಬಂಧಿ ಕಾಯಿಲೆಗಳನ್ನು ಉಂಟು ಮಾಡಿದೆ.

ಇವೆಲ್ಲಕ್ಕಿಂತಲೂ ಮುಖ್ಯವಾಗಿ ಕಳೆದ ಎರಡು ದಶಕಗಳಿಂದ ನಮ್ಮಲ್ಲಿ ಅತಿ ಹೆಚ್ಚು ಬಳಕೆಯಾಗುತ್ತಿರುವ ಪ್ಲಾಸ್ಟಿಕ್ ಎಂಬ ಪೆಡಂಭೂತ. ಊಟಕ್ಕೆ ಬಳಸುವ ತಟ್ಟೆ, ಲೋಟಗಳಿಂದ ಹಿಡಿದು ಕುರ್ಚಿ ಟೇಬಲ್ಲುಗಳವರೆಗೆ ಪ್ಲಾಸ್ಟಿಕ್ ನದ್ದೇ ಕಾರುಬಾರು. ಇನ್ನು ಮದುವೆ ಮುಂಜಿಗಳಲ್ಲಿಯೂ ಕೂಡ ಬಳಸಿ ಬಿಸಾಡುವ ಪ್ಲಾಸ್ಟಿಕ್ ತಟ್ಟೆ ಲೋಟಗಳನ್ನು ಉಪಯೋಗಿಸುವ ಕಾರಣ ಬೃಹತ್ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗುತ್ತದೆ. ಇನ್ನು ಪ್ಲಾಸ್ಟಿಕ್ ಕವರ್ ಗಳು ಅಬ್ಬಬ್ಬಾ! ಹೇಳಲು ಸಾಧ್ಯವಿಲ್ಲ. ಮಾರುಕಟ್ಟೆಗೆ ಹೋದರೆ ತರುವ ಪ್ರತಿಯೊಂದು ವಸ್ತುವು ಕೂಡ ಪ್ಲಾಸ್ಟಿಕ್ ಕವರಿನಲ್ಲಿಯೇ ಬರುತ್ತದೆ ದಿನಬಳಕೆಯ ದಿನಸಿ ಅಂಗಡಿ, ತರಕಾರಿ ಅಂಗಡಿಗಳಲ್ಲಿ ಕೊಡುವ ಪ್ಲಾಸ್ಟಿಕ್ ಕವರ್ ಗಳಂತೂ 40 ಮೈಕ್ರೋನ್ಗಿಂತಲೂ ಕಡಿಮೆ ದಪ್ಪವನ್ನು ಹೊಂದಿದ್ದು ಒಂದು ಬಾರಿ ಬಳಕೆ ಮಾಡಿ ಎಸೆಯಲ್ಪಡುತ್ತವೆ. ಈ ಪ್ಲಾಸ್ಟಿಕ್ ನ ಅತಿ ದೊಡ್ಡ ತೊಂದರೆ ಎಂದರೆ ಇದು ನೀರಿನಲ್ಲಿ ಕರಗದು, ಭೂಮಿಯ ಮಣ್ಣಲ್ಲಿ ಮಣ್ಣಾಗದು ಆಕಾಶದಲ್ಲಿ ಮರೆಯಾಗದು. ಬಳಕೆಯ ದೃಷ್ಟಿಯಿಂದ ಯೋಗ್ಯವಲ್ಲದ ಗಾತ್ರದ ಪ್ಲಾಸ್ಟಿಕ್ ಕವರ್ ಗಳು ಭೂಮಿಯ ಎಲ್ಲ ಭಾಗದಲ್ಲಿಯೂ ವಿವೇಚನಾ ರಹಿತವಾಗಿ ಬಳಸಲ್ಪಡುತ್ತಿದ್ದು ಅವುಗಳ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವುದು ಕಷ್ಟವಾಗಿದೆ.

ಒಂದೆರಡು ದಶಕಗಳ ಹಿಂದೆ ಮುಂಬೈಯಲ್ಲಿ ವಿಪರೀತ ಮಳೆಯಾಗಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಾಗ ಕಾರಣವನ್ನು ಹುಡುಕಿದ ಬೃಹತ್ ಮುಂಬಯಿ ಮಹಾನಗರ ಪಾಲಿಕೆಗೆ ದೊರೆತ ತೊಂದರೆಯ ಮೂಲ ಪ್ಲಾಸ್ಟಿಕ್. ಪ್ಲಾಸ್ಟಿಕ್ ನ ಹಾಳೆಗಳನ್ನು ಸೂಕ್ತವಾಗಿ ವಿಲೇವಾರಿ ಮಾಡದೆ ಇದ್ದುದರ ಪರಿಣಾಮವಾಗಿ ಚರಂಡಿಗಳ ಬಾಯಿಗೆ ಹೋಗಿ ಸಿಲುಕಿದ ಪ್ಲಾಸ್ಟಿಕ್ ಗಳು ನೀರನ್ನು ಹೊರ ಹಾಕಲು ಸಾಧ್ಯವಾಗದೆ ಅಲ್ಲಲ್ಲಿ ಚರಂಡಿಗಳು ಕಟ್ಟಿಕೊಂಡು ಪ್ರವಾಹ ಪರಿಸ್ಥಿತಿ ಏರ್ಪಟ್ಟಿತ್ತುಎಂಬ ವರದಿಯನ್ನುಕೇಳಿ ಬಾಯಿಯ ಮೇಲೆ ಬೆರಳಿಟ್ಟುಕೊಂಡವರು ಬಹಳಷ್ಟು ಜನ. ಇದೀಗ ಪ್ಲಾಸ್ಟಿಕ್ ಎಂಬ ರಕ್ತ ಬೀಜಾಸುರನ ಸಂತತಿ ಇಡೀ ಭೂಮಿಯನ್ನು ಆವರಿಸಿದ್ದು ಈ ಪ್ಲಾಸ್ಟಿಕ್ ಅನ್ನು ನುಂಗಿ ಹಾಕುವ ದೇವತೆಗಾಗಿ ನಾವು ಕಾಯಬೇಕಾಗಿದೆ.

ಪರಿಸರ ಜಾಗೃತಿ ಎಂಬುದು ಕೇವಲ ಒಂದು ದಿನ ಸಸಿಯನ್ನು ನೆಟ್ಟು ಫೋಟೋಗೆ ಫೋಸ್ ಕೊಟ್ಟು ಪರಿಸರ ಉಳಿಸುವ ಕುರಿತು ಒಂದೆರಡು ಮಾತುಗಳನ್ನಾಡಿ ಮುಗಿಸಿದರೆ ಆಯ್ತು ಎಂಬ ಭಾವ ಖಂಡಿತವಾಗಿಯೂ ಬೇಡ. ಪರಿಸರ ದಿನಾಚರಣೆ ಸಾಮಾಜಿಕ ಜಾಗೃತಿಯಾಗಿ ಬದಲಾಗಲಿ. ಪರಿಸರ ದಿನಾಚರಣೆ ವೃಕ್ಷ ಸಂಪತ್ತನ್ನು ಹೆಚ್ಚಿಸುವ ಅಭಿಯಾನವಾಗಲಿ. ಪರಿಸರ ದಿನಾಚರಣೆಯ ಮೂಲಕ ನಾವು ಪರಿಸರಕ್ಕೆ ಹಾನಿ ಮಾಡುವ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ಕಡಿಮೆ ಮಾಡುವುದು ಇಲ್ಲವೇ ನಿಷೇಧಿಸುವುದಕ್ಕೆ ಪ್ರಯತ್ನ ಮಾಡಬೇಕು.

ಪರಿಸರವನ್ನು ನಮಗಾಗಿ ನಾವು ಉಳಿಸಿಕೊಳ್ಳುವ ಮತ್ತು ನಮ್ಮ ಮುಂದಿನ ಪೀಳಿಗೆಗಾಗಿ ಬಿಟ್ಟು ಕೊಡುವ ಅತಿ ದೊಡ್ಡ ಉಡುಗೊರೆಯಾಗಿ ನಾವು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳೋಣ. ಸಾಧ್ಯವಾದಷ್ಟು ಪರಿಸರಕ್ಕೆ ಹತ್ತಿರವಾದ ವಸ್ತುಗಳ ಬಳಕೆ ಮಾಡೋಣ ಎಷ್ಟೇ ಅವಸರದಲ್ಲಿದ್ದರೂ ಕೂಡ ನಿಧಾನವಾಗಿ ಇಲ್ಲವೇ ಸ್ಥಿರವಾಗಿ ಗಾಡಿಯನ್ನು ಚಲಾಯಿಸೋಣ. ನಮ್ಮ ವಾಹನಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಮೂಲಕ ವಾಯು ಮಾಲಿನ್ಯವನ್ನು ಕಡಿಮೆ ಮಾಡೋಣ.

ನಾವು ಪರಿಸರವನ್ನು ರಕ್ಷಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ , ಪರಿಸರ ಜಾಗೃತಿ ಎಂಬುದು ನಮ್ಮ ಬದುಕಿನ ಬಹುದೊಡ್ಡ ಅಭಿಯಾನವಾಗಲಿ ಮತ್ತು ಭೂಮಿಯ ಮೇಲೆ ಹುಟ್ಟಿರುವ ಪ್ರತಿಯೊಂದು ಜೀವಿಯು ಪರಿಸರ ಪ್ರಜ್ಞೆಯನ್ನು ತನ್ನಲ್ಲಿ ಬೆಳೆಸಿಕೊಳ್ಳಲಿ ಅಂದಾಗ ಮಾತ್ರ ಪರಿಸರ ದಿನಾಚರಣೆಯನ್ನು ಆಚರಿಸಿದ್ದಕ್ಕೂ ಸಾರ್ಥಕ ಎಂಬುದು ನನ್ನ ಅನಿಸಿಕೆ.

---

## ಕವಿ ಮನಸು

### ಕಾಮನಬಿಲ್ಲು

ಏಳು ಬಣ್ಣಗಳ ಒಡೆಯ ಕಾಮನಬಿಲ್ಲು
ಧರೆಗೆ ಇಳಿದು ಬಂದಂತಿದೆ ಮಳೆಬಿಲ್ಲು
ಪ್ರತಿಯೊಂದು ಬಣ್ಣಕ್ಕಿದೆ ಒಂದೊಂದು ಮಹತ್ವ
ಸಾರುವುದು ಅದರದ್ದೇ ಆದ ವ್ಯಕ್ತಿತ್ವ

ಆಗಸದಲ್ಲಿ ಮೂಡಿದೆ ಬಣ್ಣಬಣ್ಣದ ಚಿತ್ತಾರ
ಪ್ರಜ್ವಲಿಸುತ ಇದೆ ರಂಗವಲ್ಲಿಯ ಝೇಂಕಾರ
ಮೂಡಿರುವುದು ಬಾಗಿದ ಬಿಲ್ಲಿನ ಆಕಾರ
ನಗು ಮೊಗದಿ ಕಂಗೊಳಿಸುವನು ನೇಸರ

ರಂಗು ರಂಗಿನಿಂದ ಕೂಡಿರಲಿ ಜೀವನ
ಸುಖಶಾಂತಿ ನೆಮ್ಮದಿ ತುಂಬಿರಲಿ ಅನುದಿನ
ನೋಡುಗರ ಮನರಂಜಿಸುತ್ತದೆ ಪ್ರಕೃತಿಯ ವಿಸ್ಮಯ
ನೋಡುತ ಕುಳಿತರೆ ಆಗುವುದು ತನ್ಮಯ

–ಚೇತನ ಭಾರ್ಗವ, ಬೆಂಗಳೂರು

### ದಾಖಲಾಗದ ಬಿಕ್ಕು

ಒಂದು ನಗುವಿಗೆ
ಅದೆಷ್ಟು ಅಳಬೇಕಿಲ್ಲಿ .?
ಉರುಳಿದ ಕಂಬನಿ
ಗಡಿರೇಖೆ ದಾಟುವುದೇ ಇಲ್ಲ
ಸುಡುವ ಎದೆಯೇ
ಆದಕ್ಕೀಗ ಗಮ್ಯ ಸ್ಥಾನ..!

ಬಿಗಿ ಹಿಡಿದು ಬಿಟ್ಟ ಉಸಿರು
ಗಾಳಿಯ ಹೊಟ್ಟೆಯೊಳಗೆ
ವಿಹಿತವಾಗಿ ಕಣ್ಣ
ಬೆಳಕಿನಲಿ ಇಷ್ಟಿಷ್ಟೇ
ಇರುಳ ಬೆರಸಿ ಕೊನೆಗೆ
ಇನ್ನಿಲ್ಲವಾಗಿಸುವ ಸಂಚು
ಜಾರಿಯಲ್ಲಿರಲು

ಭ್ರೂಣದಲ್ಲೇ ಕರಗುವ
ಬಿಕ್ಕಳಿಕೆಯೊಂದರ
ಮರ್ಮರ ಯಾವ
ಪುಟದಲ್ಲೂ
ದಾಖಲಾಗುವುದೇ ಇಲ್ಲ
ಚಡಪಡಿಕೆಯೊಂದು
ಖಾಯಂ, ಕರುಳ ತಳದಲ್ಲಿ

ಕಾಲದಾತುರಕೆ
ಕಾಲೆಳೆದು ಎಲ್ಲೋ ಬಿದ್ದು
ಇನ್ನೆಲ್ಲೋ ಏಳುವ ಪರಿಗೆ
ಎಡವಿದ ಕಲ್ಲೇ ಅಣಕಿಸುವಾಗ
ಬಾಚಿ ತಬ್ಬಲು
ಎದುರಾಗುವ ಜೋಡಲಗಿನ
ನಾಜೂಕು ತೋಳುಗಳು

ಅಪ್ಪಿಕೊಳ್ಳಲೇಬೇಕಿದೆ
ಈ ಲೋಕ ಒಪ್ಪಿಕೊಂಡಂತೆ
ಅದೆಷ್ಟೋ ವೈರುಧ್ಯಗಳನ್ನು
ಆಗಲೇ ಅಂಕದ
ಪರದೆ ಸರಿಯುವುದು...!

– ಹೊನ್ನಪ್ಪ. ನೀ. ಕರೆಕನ್ನಮ್ಮನವರ
ತಿರುಮಲಕೊಪ್ಪ

## ಮೈಕ್ರೋ ನ್ಯೂಸ್

### ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿನ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 05 ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ತಯಾರಿಸಿ ಕೊಪ್ಪಳ ಜಿಲ್ಲಾ ವೆಬ್‌ಸೈಟ್ www.koppal.nic.in ರಲ್ಲಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಪರಿಶೀಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವೆಬ್‌ಸೈಟ್‌ನ್ನು ವೀಕ್ಷಿಸಬಹುದು ಎಂದು ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**11–06–2025 – ಬುಧವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ಸಾಧ್ಯ |
| ಕರಣ | : ಭವ |
| ಸೂರ್ಯೋದಯ | : 05:41:52 |
| ಸೂರ್ಯಾಸ್ತ | : 19:11:32 |
| ರಾಹು ಕಾಲ | : 12:27–14:08 |
| ಯಮಘಂಡ ಕಾಲ | : 07:23–09:04 |
| ಗುಳಿಕ ಕಾಲ | : 10:45–12:27 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 10–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.98 ಅಡಿ |
| ಒಳ ಹರಿವು | 4949 ಕ್ಯುಸೆಕ್ |
| ಹೊರ ಹರಿವು | 147 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 24.184 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.23 ಅಡಿ |
| ಒಳ ಹರಿವು | 4817 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಸಾಮರ್ಥ್ಯ | 4.581 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಪರಿಸರ ರಕ್ಷಣೆ ಎಲ್ಲರ ಜವಾಬ್ದಾರಿ

## ವಿಶ್ವ ಪರಿಸರ ದಿನಾಚರಣೆ ಹಾಗೂ ವನಮಹೋತ್ಸವ ಕಾರ್ಯಕ್ರಮ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮರ ಗಿಡಗಳನ್ನು ಬೆಳೆಸಿ, ಸಂರಕ್ಷಣೆ ಮಾಡುವುದರಿಂದ ಭವಿಷ್ಯದಲಿ ಉತ್ತಮ ಆರೋಗ್ಯವನ್ನು ನಮ್ಮದಾಗಿಸಿಕೊಳ್ಳಬಹುದು ಎಂಬುದನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು ಎಂದು ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಹೇಳಿದರು.

ಚಿಕ್ಕಜೋಗಿಹಳ್ಳಿಯಲ್ಲಿನ ಪಿಎಂ ಶ್ರೀ ಜವಹರ್ ನವೋದಯ ವಿದ್ಯಾಲಯ ಮತ್ತು ಪಟ್ಟಣದ ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಬಾಲಕಿಯರ ವಸತಿ ನಿಲಯದಲ್ಲಿ ಕೂಡ್ಲಿಗಿ ಸಾಮಾಜಿಕ ಅರಣ್ಯ ಮತ್ತು ಕೂಡ್ಲಿಗಿ, ಗುಡೇಕೋಟೆ ವಲಯ ಅರಣ್ಯ ಇಲಾಖೆಗಳಿಂದ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಹಾಗೂ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ. ನಿತ್ಯ ನಮಗೆ ಅವಶ್ಯವಾದ ಆಮ್ಲಜನಕವನ್ನು ಉಚಿತವಾಗಿ ನೀಡುವ ಗಿಡಮರಗಳನ್ನು ರಕ್ಷಿಸಿದೇ ಹೋದರೆ ಮನುಷ್ಯನ ಬದುಕು ವಿನಾಶದತ್ತ ಸಾಗಲಿದೆ. ವಿದ್ಯಾರ್ಥಿ ದೆಸೆಯಿಂದಲೇ ಪರಿಸರದ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕು ಎಂದರು.

ಸಾಮಾಜಿಕ ವಲಯ ಅರಣ್ಯಾಧಿಕಾರಿ ಕೆ.ಟಿ, ಲತಾ, ವಲಯ ಅರಣ್ಯಾಧಿಕಾರಿಗಳಾದ ಕೂಡ್ಲಿಗಿಯ ಸಂದೀಪ್ ನಾಯಕ್, ಗುಡೇಕೋಟೆಯ ಜಗದೀಶ್ ಮೇದಾ, ಮಾಕನಡಕು ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಎಂ.ಸಿ. ಅಶೋಕ ನಾಯ್ಕ್, ಸದಸ್ಯರಾದ ಓಬಣ್ಣ, ರಾಜೇಶ್ ನಾಯ್ಕ್ ಜೆ.ಎಂ., ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಭರತ್ ಕುಮಾರ್, ಜವಾಹರ್ ನವೋದಯ ವಿದ್ಯಾಲಯದ ಪ್ರಾಚಾರ್ಯ ಸುದೇಶ ಗೋಪಾಲ್ ಮಲ್ಲುರೆ ಹಾಗೂ ಸಿಬ್ಬಂದಿ, ಅರಣ್ಯ ಇಲಾಖೆ ಸಿಬ್ಬಂದಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶ್ಯಾಮ್, ವಿಸ್ತೀರಣಾಧಿಕಾರಿ ಟಿ. ಆಹಮದ್ ಸವೇಬ್, ವಸತಿ ನಿಲಯದ ಮೇಲ್ವಿಚರಕಿ ಆರ್.ಬಿ. ಕೊಟ್ರಮ್ಮ, ಕುಮಾರಸ್ವಾಮಿ, ಅಂಜಿನಪ್ಪ, ನಿಂಗಣ್ಣ, ವಿದ್ಯಾರ್ಥಿಗಳಿದ್ದರು.

# ಜೂ.13 ಲೋಕಾಯುಕ್ತರಿಂದ ಅಹವಾಲು ಸ್ವೀಕಾರ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**

ಗೌರವಾನ್ವಿತ ಲೋಕಾಯುಕ್ತರು ಬೆಂಗಳೂರು ಹಾಗೂ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅವರ ಆದೇಶದ ಮೇರೆಗೆ ಕೊಪ್ಪಳ ಲೋಕಾಯುಕ್ತ ಅಧಿಕಾರಿಗಳಿಂದ ಕೊಪ್ಪಳ ತಾಲ್ಲೂಕಿನಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕರಿಸಲು ಜೂನ್ 13 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕೊಪ್ಪಳ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಅಹವಾಲು ಸ್ವೀಕಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಸಭೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಎಲ್ಲಾ ಇಲಾಖೆಯ ತಾಲ್ಲೂಕ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಕೊಪ್ಪಳ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿಗಳಿಂದ ತಮಗೆ ಆಗಬೇಕಾದ ಕೆಲಸಗಳಲ್ಲಿ ವಿಳಂಬವಾಗಿದ್ದರೆ ಅಥವಾ ಅಧಿಕಾರಿಗಳು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುತ್ತಿದ್ದರೆ ಅಥವಾ ಲಂಚ ಕೇಳುವುದು ಇತ್ಯಾದಿ ದುರಾಡಳಿತದಲ್ಲಿ ತೊಡಗಿದ್ದರೆ, ಈ ಕುರಿತು ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ನೇರವಾಗಿ ಬಂದು ಸಲ್ಲಿಸಲು ಹಾಗೂ ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಕೆಲಸ ನೆರವೇರಿಸಿಕೊಳ್ಳಲು ಅಥವಾ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ: 1 & 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದೆ. ಕೊಪ್ಪಳ ತಾಲ್ಲೂಕಿನ ಸಾರ್ವಜನಿಕರು ಈ ಸಭೆಯ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9364062699, 93640 62700, 9364062701, 9364062702 ಹಾಗೂ 93640 62703 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಕೊಪ್ಪಳ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜುಲೈ 3 ರಿಂದ 5ರ ವರೆಗೆ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಪರೀಕ್ಷಾ ಶಿಬಿರಗಳು ಆರಂಭ



■ **ಹಂಪಿ ಟೈಮ್ಸ್ ಹೊಸಪೇಟೆ**

ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ವಿಶೇಷ ಪರೀಕ್ಷೆಗಳಾದ ತೃತೀಯ ಸೋಪಾನ, ತೃತೀಯ ಚರಣ್, ಸುವರ್ಣ ಪಂಖ್ ಹಾಗೂ ನಿಪುಣ ಪರೀಕ್ಷಾ ಶಿಬಿರಗಳು ಜುಲೈ.3 ರಿಂದ 5 ರವರೆಗೆ ನಡೆಸಲಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಪಿ. ಮಂಜುನಾಥಪ್ಪ ತಿಳಿಸಿದ್ದಾರೆ.


> **ಜುಲೈ 3 ರಿಂದ 5 ರವರೆಗೆ ನಿಪುಣ ಪರೀಕ್ಷಾ ಶಿಬಿರಗಳು**

ನಗರದ ಜಿಲ್ಲಾ ಕಚೇರಿಯಲ್ಲಿ ಏರ್ಪಡಿಸಿದ್ದ ಯೋಜನಾ ಸಮಿತಿ ಸದಸ್ಯರ ಸಭೆಯಲ್ಲಿ ಅಧ್ಯಕ್ಷತೆವಹಿಸಿಸೋಮವಾರಮಾತನಾಡಿದರು, ತಾಲೂಕು ಮತ್ತು ಜಿಲ್ಲಾ ಹಂತದಲ್ಲಿ ನಡೆಯುವ ಪರೀಕ್ಷಾ ಶಿಬಿರಗಳಿಗೆ ಎಲ್ಲಾ ಸ್ಕೌಟರ್ ಮತ್ತು ಗೈಡರ್‌ಗಳು ಸಕ್ರಿಯವಾಗಿ ಭಾಗವಹಿಸಬೇಕು. ಈಗಾಗಲೇ ಬ್ಯಾಡ್ಜ್ ಸಮಿತಿ ರಚಿಸಲಾಗಿದ್ದು, ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ನಡೆಯುವ ಪರೀಕ್ಷೆಗಳಿಗೆ ಮಕ್ಕಳು ಪರಿಪೂರ್ಣ ಜ್ಞಾನ ಹೊಂದಲು ಪ್ರಾವಿಣ್ಯತಾ ಪದಕದ ಪ್ರಮಾಣ ಪತ್ರ ಜತೆಗೆ ಜಿಲ್ಲಾ ಪದಕಗಳನ್ನು ಆಯಾ ಸಮಿತಿ ನೇಮಕ ಮಾಡಿರುವ ಪರೀಕ್ಷಕರಿಂದ ಪಡೆದುಕೊಳ್ಳಲು ಉತ್ತೇಜನ ನೀಡಬೇಕಿದೆ ಎಂದರು.

ಇದೇ ವೇಳೆ ರಾಜ್ಯ ಸಂಸ್ಥೆಯವರು ಸ್ಥಳೀಯ ಸಂಸ್ಥೆಗಳಿಗೆ ಅನುದಾನ ನೀಡಿರುವ ಲೆಕ್ಕಾ ಪತ್ರಗಳನ್ನು ಕೂಡಲೇ ಜಿಲ್ಲಾ ಸಂಸ್ಥೆಗೆ ನೀಡವುದು. ಮತ್ತು ಬೇಸಿಗೆ ಶಿಬಿರದ ಮಕ್ಕಳ ಪಟ್ಟಿಯನ್ನು ಹಾಗೂ ರಾಜ್ಯ ಪುರಸ್ಕಾರ ಅರ್ಜಿ ಸಲ್ಲಿಸಿದ ಮಕ್ಕಳ ಪಟ್ಟಿಯನ್ನು ಹಾಗೂ ತೃತೀಯ ಸೋಪಾನ ಅರ್ಹರಾದ ಸ್ಕೌಟ್ಸ್‌ಗಳ ಪಟ್ಟಿಯನ್ನು 2024–25 ನೇ ಸಾಲಿನಲ್ಲಿ ಗ್ರಾಪಂ, ತಾಪಂಗಳಿಂದ ಸಂಗ್ರಹಿಸಿದ ವಂತಿಗೆ ಮಾಹಿತಿಯನ್ನು ವಾರ್ಷಿಕ ವರದಿಯನ್ನು ಸಭೆಗೆ ಸಲ್ಲಿಸಲಾಯಿತು.

ಸಭೆಯಲ್ಲಿ ಯೋಜನಾ ಸಮಿತಿ ಸದಸ್ಯರಗಳಾದ ಮಂಗಳಗೌರಿ, ಜಿ.ಎಂ.ರಾಜಶೇಖರ್, ಶೆರಿನಾ, ಗೀತಾಂಜಲಿ ಗೌಡ, ಶ್ರೀನಿವಾಸ್.ಜಿ.ಜೋಷಿ, ನಾಗಭೂಷಣ್ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಾದ ತಿಂದಪ್ಪ, ಮಾದೇಶ, ಎಲ್.ಮೂರ್ತಿ, ಬನ್ನಿಗೌಡ, ತಿಪ್ಪೇಸ್ವಾಮಿ, ದಳನಾಯಕರಾದ ಕುಮಾರಸ್ವಾಮಿ, ಜಿಲ್ಲಾ ಸಂಘಟಕರಾದ ಜಿ.ಬಿ.ಸಿ ಪಾಟೀಲ್ ಇತರರಿದ್ದರು.

# ಜಾತಿಗಣತಿ ವರದಿಗೆ ತಾತ್ವಿಕ ಒಪ್ಪಿಗೆ ಸಮೀಕ್ಷೆ ಮರುಗಣತಿಗೆ ನಿರ್ಧಾರ



■ **ನವದೆಹಲಿ:** ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎದ್ದಿರುವ ಹಿನ್ನಲೆಯಲ್ಲಿ, ಈಗಾಗಲೇ ಸಲ್ಲಿಕೆಯಾಗಿರುವ ಜಾತಿಗಣತಿ ವರದಿಗೆ ತಾತ್ವಿಕ ಒಪ್ಪಿಗೆ ನೀಡಿ, ಸಮೀಕ್ಷೆಗೆ ಮರುಗಣತಿ ನಡೆಸಲು ನಿರ್ಧಾರ ಕೈಗೊಂಡಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಮಂಗಳವಾರ ನವದೆಹಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಇಂದು ಕರ್ನಾಟದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಕಾಂಗ್ರೆಸ್ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಲಾಗಿದೆ. ವಿವಿಧ ಜಾತಿಗಳ ಸಂಘಸಂಸ್ಥೆಗಳು, ಮಠಾಧೀಶರು, ಸಮುದಾಯದಗಳ ಮುಖಂಡರು, ಸಚಿವರು ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎತ್ತಿರುವ ಬಗ್ಗೆ ಚರ್ಚಿಸಲಾಗಿ, ಜಾತಿಗಣತಿ ವರದಿಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುವುದು ಹಾಗೂ ಜಾತಿ ಗಣತಿಯ ದತ್ತಾಂಶ ಹತ್ತು ವರ್ಷ ಹಳೆಯದಾಗಿರುವುದರಿಂದ ಮರುಗಣತಿ ಮಾಡಲು ತೀರ್ಮಾನಿಸಲಾಗಿದೆ. ಈಗಾಗಲೇ ಪರಿಶಿಷ್ಟ ಜಾತಿಗಳ ಜನಗಣತಿ ನಡೆದಂತೆ, ಇತರೆ ಜಾತಿಗಳ ಗಣತಿಯನ್ನು ಹೊಸದಾಗಿ ಕೈಗೊಳ್ಳಲು ನಿರ್ಧರಿಸಲಾಗಿದೆ. ಸಮೀಕ್ಷಾ ಕಾರ್ಯವನ್ನು 90 ದಿನದೊಳಗೆ ಪೂರ್ಣಗೊಳಿಸಿ ವರದಿ ನೀಡಬೇಕಾಗುವುದು ಎಂದು ತಿಳಿಸಿದರು.

**ಕಾಲ್ತುಳಿತ ಪ್ರಕರಣ: ಸರ್ಕಾರದ ಕ್ರಮಗಳ ಬಗ್ಗೆ ವರಿಷ್ಠರಿಗೆ ವಿವರಣೆ**

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾಲ್ತುಳಿತ ಪ್ರಕರಣದ ಬಗ್ಗೆ ಚರ್ಚಿಸಿ, ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ವರಿಷ್ಠರಿಗೆ ವಿವರಿಸಲಾಗಿದೆ. ಪ್ರಕರಣದ ತನಿಖೆಗೆ ಜಿಲ್ಲಾಧಿಕಾರಿಗಳ ನೇತೃತ್ವದ ಮ್ಯಾಜಿಸ್ಟ್ರಿಯಲ್ ತನಿಖೆ, ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಏಕಸದಸ್ಯ ಆಯೋಗ ರಚನೆ ಮೈಕೆಲ್ ಕುನಾ, ಐದು ಪೊಲೀಸ್ ಅಧಿಕಾರಿಗಳ ಅಮಾನತ್ತು, ಗುಪ್ತಚರ ಇಲಾಖೆಯ ಮುಖ್ಯಸ್ಥರ ಬದಲಾವಣೆ, ರಾಜಕೀಯ ಕಾರ್ಯದರ್ಶಿಗಳ ಬದಲಾವಣೆಯಂತಹ ಸರ್ಕಾರದ ಕ್ರಮಗಳು ಸಮರ್ಪಕವಾಗಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕ ಸದಸ್ಯ ಆಯೋಗದ ತನಿಖಾ ವರದಿಯನ್ನು ಆಧರಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

**ಸಚಿವ ಸಂಪುಟ ಪುನರ್ರಚನೆಯ ಬಗ್ಗೆ ಚರ್ಚೆಯಾಗಿಲ್ಲ:** ಇದೇ ತಿಂಗಳ 13 ರಂದು 16 ನೇ ಹಣಕಾಸಿನ ಆಯೋಗದ ಅಧ್ಯಕ್ಷರನ್ನು ಭೇಟಿಯಾಗಲು ನವದೆಹಲಿಗೆ ಆಗಮಿಸಲಿದ್ದೇನೆ. ಸಚಿವ ಸಂಪುಟ ಪುನರ್ರಚನೆಯ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ ಎಂದರು.

**ಕುಂಭಮೇಳದ ಕಾಲ್ತುಳಿತ ಘಟನೆ– ಅಲ್ಲಿನ ಸಿಎಂ ಜವಾಬ್ದಾರರಲ್ಲವೇ?**

ಕೇಂದ್ರದ ಸಂಸತ್ ನಲ್ಲಿ ಬೆಂಗಳೂರಿನ ಕಾಲ್ತುಳಿತದ ಘಟನೆ ಚರ್ಚೆಗೆ ಬರುವ ಸಾಧ್ಯತೆಯಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕೇಂದ್ರ ಸರ್ಕಾರ ಮೊದಲು ಕುಂಭಮೇಳದಲ್ಲಿ ನಡೆದ ಕಾಲ್ತುಳಿತ, ಪ್ರಧಾನಿಯವರು ಉದ್ಘಾಟಿಸಿದ ಸೇತುವೆ ಕುಸಿದು ಜನ ಮೃತಪಟ್ಟ ಘಟನೆಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯಲಿ. ಬೆಂಗಳೂರಿನಲ್ಲಿ ನಡೆದ ಘಟನೆ ನಡೆದಿರುವುದು ಸರ್ಕಾರಕ್ಕೆ ದು:ಖದ ಸಂಗತಿಯಾಗಿದೆ. ಯುವಜನರ ಸಾವು ಎಲ್ಲರಿಗೂ ನೋವು ತರುವ ವಿಚಾರ. ಕುಂಭಮೇಳದ ಘಟನೆಯಲ್ಲಿ ಜನರ ಸಾವು ಪ್ರಕರಣದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ಜವಾಬ್ದಾರಿಯಲ್ಲವೇ ಎಂದು ಪ್ರಶ್ನಿಸಿದರು.

ಇಡಿ ತನಿಖಾ ಸಂಸ್ಥೆ 100ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕಾನೂನು ಕ್ರಮ ತೆಗೆದುಕೊಂಡಿರುವುದಕ್ಕೆ ಯಾವುದೇ ಆಕ್ಷೇಪವಿಲ್ಲ ಎಂದರು.

# ರೈತರಿಗೆ ತೊಂದರೆ ಆರೋಪಿ ವಿರುದ್ಧ ಕ್ರಮಕ್ಕೆ ಆಗ್ರಹ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಹರಾಳು ಗ್ರಾಮದ ಮರಿಗೋಣೆಪ್ಪನ ಮಗ ಮಂಜಪ್ಪನ ಹೊಲದಲ್ಲಿ 12 ವರ್ಷಗಳಿಂದ ಟಿ.ಸಿ ( ಟ್ರಾನ್ಸ್ ಫಾರ್ಮ್) ಇದ್ದು, ಇದಕ್ಕೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಹಡಗಲಿ ಮಂಜಪ್ಪ ಅನಧಿಕೃತವಾಗಿ ಕಡಿತಗೊಳಿಸಿ ರೈತರಿಗರ ತೊಂದರೆಯನ್ನು ನೀಡುತ್ತಿದ್ದಾರೆ ಈ ಕುರಿತು ಕ್ರಮ ವಹಿಸಬೇಕೆಂದು ಆಗ್ರಹಿಸಿ ರೈತರ ಸಂಘ ಹಾಗೂ ಹಸಿರು ಸೇನೆ ಉಪಾಧ್ಯಕ್ಷ ಎನ್ ಭರ್ಮಣ್ಣ ಮತ್ತು ರೈತರು ಜೆಸ್ಕಾಂ ಕಚೇರಿಯ ಮುಂಭಾಗ ಪ್ರತಿಭಟನೆ ನಡೆಸಿದರು.

ಕಳೆದ ಮೂರು ತಿಂಗಳಿಂದ ಹಡಗಲಿ ಮಂಜಪ್ಪ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಅಕ್ಕಪಕ್ಕದ ರೈತರಿಗೆ ಕೃಷಿ ಚಟುವಟಿಕೆಗೆ ಅಡಚಣೆಯನ್ನು ಮಾಡುತ್ತಿದ್ದಾರೆ ಈ ಕುರಿತು ಜೆಸ್ಕಾಂ ಇಂಜಿನಿಯರ್‌ಗೆ ಹೇಳಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನೆಯಲ್ಲಿದ್ದ ರೈತರು ಬೇಸರ ವ್ಯಕ್ತಪಡಿಸಿ ಜೆಸ್ಕಾಂ ಇಲಾಖೆಯ ಎಇಇ ನಾಗರಾಜ್ ಅವರಿಗೆ ಮನವಿ ಸಲ್ಲಿಸಿದರು.

ಗುರುಬಸವರಾಜ್, ಸೊಕ್ಕೆ ಮಂಜಪ್ಪ, ದಡ್ಡಿ ಮೂಗಪ್ಪ, ಉಜ್ಜಿನಿ ಕೊಟ್ರಪ್ಪ, ಮಿಡಿಚಿ ತಿರ್ಕಪ್ಪ, ದಡ್ಡಿ ನಾಗರಾಜ್, ಬಾಲಣ್ಣ, ಅಂಜಿನಪ್ಪ, ದಡ್ಡಿ ಕೊಟ್ರೇಶ್, ಗುರುಬಸವರಾಜ ಸೇರಿದಂತೆ ಇತರರಿದ್ದರು.

> **ಜೆಸ್ಕಾಂ ಇಲಾಖೆಯ ಆಸ್ತಿಯನ್ನು ಹಾನಿ ಮಾಡಿ, ಮತ್ತು ವೈಯಕ್ತಿಕವಾಗಿ ನನಗೆ ರೂ.30,000 ರೂಗಳನ್ನು ನೀಡಿದ್ದೇನೆ ಎಂದು ಸುಳ್ಳು ಆರೋಪ ಮಾಡಿರುವ ಮಂಜಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದೇನೆ.**
> **– ನಾಗರಾಜ್, ಎಇಇ ಜೆಸ್ಕಾಂ**

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
SCAN to READ HAMPI TIMES E-PAPER

## ಹಂಪಿ ಟೈಮ್ಸ್ ಓದುಗರ ಸಂಭ್ರಮ!

ಜೂನ್ 21, 2025 ಹಂಪಿ ಟೈಮ್ಸ್ ತನ್ನ ಎರಡನೇ ವರ್ಷದ ಪಯಣವನ್ನ ಪ್ರಿಂಟ್ ಮತ್ತು ಡಿಜಿಟಲ್ ಮೂಲಕ ಯಶಸ್ವಿಯಾಗಿ ಪೂರೈಸುತ್ತಿದೆ. ಈ ಪ್ರಯಾಣದ ಎಲ್ಲಾ ಹೆಜ್ಜೆಗೂ ನಿಮ್ಮ ಬೆಂಬಲ, ಪ್ರೀತಿ ಹಾಗೂ ಮಾರ್ಗದರ್ಶನಕ್ಕೆ ಅನಂತ ಧನ್ಯವಾದಗಳು.

ಈ ಸಂದರ್ಭದಲ್ಲಿ ಪತ್ರಿಕೆಯ ಪಯಣದ ಬಗ್ಗೆ ನಿಮ್ಮ ಸಂತಸ, ಮೆಚ್ಚುಗೆ, ಪ್ರೋತ್ಸಾಹ ಹಾಗೂ ಸಲಹೆಗಳನ್ನು ಬರೆದು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ಅಭಿಪ್ರಾಯಗಳು ನಮ್ಮ ಹೃದಯ ಸ್ಪರ್ಶಿಸುತ್ತವೆ.

**ಹಂಪಿ ಟೈಮ್ಸ್ ಬಗ್ಗೆ ನಿಮ್ಮ ಅಭಿಪ್ರಾಯವೇನು?**
**ಇಲ್ಲಿ ಪ್ರಕಟವಾದ ಯಾವ ಲೇಖನ ನಿಮಗೆ ಸ್ಫೂರ್ತಿ ನೀಡಿತು?**
**ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಗತಿಗೆ ಹಂಪಿ ಟೈಮ್ಸ್ ಪಾತ್ರ ?**
**ಏನೇನನ್ನು ಇನ್ನಷ್ಟು ಉತ್ತಮಪಡಿಸಬಹುದು ಎಂದು ನೀವು ಭಾವಿಸುತ್ತೀರಿ?**
ನಿಮ್ಮ ಅಭಿಪ್ರಾಯ/ ಆಲೋಚನೆ/ ಕವನ/ ಲೇಖನ/ ಚುಟುಕು ಬರಹ ಅಥವಾ ವಿಡಿಯೋ ಸಂದೇಶಗಳನ್ನೂ ಸಹ ಸ್ವಾಗತಿಸುತ್ತೇವೆ. ನಿಮ್ಮ ಅಭಿಪ್ರಾಯಗಳ ಜೊತೆ ಭಾವಚಿತ್ರ ಇರಲಿ...

ನಿಮ್ಮ ಅಭಿಪ್ರಾಯಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿ:
Email: hampitimes@gmail.com
WhatsApp: 9448633038
ಅಥವಾ ನೇರವಾಗಿ ನಮ್ಮ ಆಫೀಸ್‌ಗೆ ನೀಡಬಹುದು.

**ನಿಮ್ಮ ಮಾತು ನಮಗೆ ಮಾರ್ಗದರ್ಶನ –**
ಹಂಪಿ ಟೈಮ್ಸ್ ಮುಂದಿನ ಹಂತದ ಬೆಳವಣಿಗೆಗೆ ನೀವು ಸ್ಫೂರ್ತಿ!
ನಿಮ್ಮ ಅಭಿಪ್ರಾಯವನ್ನು ಜೂನ್ 18ರೊಳಗೆ ಕಳುಹಿಸಿ – ಆಯ್ದ ಬರಹಗಳು ವಾರ್ಷಿಕ ವಿಶೇಷ ಪುರವಣಿಯಲ್ಲಿ ಪ್ರಕಟವಾಗುತ್ತವೆ!

ಬಸಾಪುರ ಬಸವರಾಜ
ಸಂಪಾದಕ

**Address:**
Editor, Hampi Times
# 32nd Ward, Near Valmiki Circle,
Bamboo Bazar, Hosapete-583201

**Mobile**
9448633038
**Email:**
hampitimes@gmail.com

E-paper Readers - 1,30,000+ | 17 lakh + Event Count